ಶ್ರೀ ಕಾಗೋಡು ತಿಮ್ಮಪ್ಪ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷರೇ, "2003 ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಉಪಾಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ-III

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕಾಗೋಡು ತಿಮ್ಮಪ್ಪ- ಮಾನ್ಯ ಉಪಾಧ್ಯಕ್ಷರೆ, " 2003ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಕಾಗೋಡು ತಿಮ್ಮಪ್ಪ- ಮಾನ್ಯ ಉಪಾಧ್ಯಕ್ಷರೇ, ಈ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ವಿಧೇಯಕ ಏನಿತ್ತು, ಇದನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಆ ಕಾನೂನು ಜಾರಿಗೆ ಬಂದ ಎರಡು ವರ್ಷಗಳ ಅವಧಿಯಲ್ಲಿ ಈ ಸಾರ್ವಜನಿಕ ಉದ್ಯಮಗಳಿಂದ ಖರೀದಿ ಮಾಡುವ ಸಂದರ್ಭದಲ್ಲಿ ನಮಗೆ ಸಾರ್ವಜನಿಕ ಉದ್ಯಮಗಳು, ಬೋರ್ಡುಗಳು ಮತ್ತು ಕಾರ್ಪೊರೇಷನ್‌ನಿಂದ ವಿನಾಯಿತಿಯ ಅವಕಾಶ ಇತ್ತು. ಅದನ್ನು ಎರಡು ವರ್ಷಗಳ ಬದಲಾಗಿ ಮೂರು ವರ್ಷ ಎನ್ನುವ ಒಂದು ತಿದ್ದುಪಡಿಯನ್ನು ತರಲಾಗಿದೆ. ಈಗಾಗಲೇ ಆರು ತಿಂಗಳಾಗಿ ಹೋಗಿದೆ. ಇನ್ನು ಉಳಿದಿರುವುದು ಆರು ತಿಂಗಳು. ಆದ್ದರಿಂದ ಎರಡು ವರ್ಷ ಎನ್ನುವ ಬದಲಾಗಿ ಮೂರು ವರ್ಷ ಎನ್ನುವ ಒಂದು ತಿದ್ದುಪಡಿಯನ್ನು ಇದರಲ್ಲಿ ಮಂಡಿಸಿದೆ. ದಯವಿಟ್ಟು ಇದನ್ನು ಮಂಜೂರು ಮಾಡಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ(ಕನಕಪುರ):- ಮಾನ್ಯ ಉಪಾಧ್ಯಕ್ಷರೇ, ನನ್ನ ಅಭಿಪ್ರಾಯದಲ್ಲಿ ಇದರ ಅವಶ್ಯಕತೆಯೇ ಇಲ್ಲ. ಏಕೆಂದರೆ ಮೊದಲನೆಯದಾಗಿ ಪಾರದರ್ಶಕತೆಯ ಕಾನೂನನ್ನು ಮಾಡಿ ವಿಧೇಯಕವನ್ನು ನಾವು ಕಳೆದ ಎರಡು ವರ್ಷಗಳ ಹಿಂದೆ ಪಾಸ್ ಮಾಡಿ ಭ್ರಷ್ಟಾಚಾರದ ಮೇಲೆ ನಿಯಂತ್ರಣವನ್ನು ಸಾಧನೆ ಮಾಡಿದ್ದೇವೆ ಎನ್ನತಕ್ಕದ್ದು ನನ್ನ ಅಭಿಪ್ರಾಯದಲ್ಲಿ ಒಂದು ಸುಳ್ಳು ಮಾತು. ಅದರಿಂದೇನೂ ಎಲ್ಲಿಯೂ ಸಹಿತ ಭ್ರಷ್ಟಾಚಾರ ಕಡಿಮೆಯಾಗಿಲ್ಲ. ಇನ್ನು ಇವರು ತಂದಿರುವ ತಿದ್ದುಪಡಿ ಏನು ಇದೆ ಎಂದರೆ ಸರ್ಕಾರಿ ವಲಯದಲ್ಲಿರುವ ಮಂಡಳಿಗಳು, ಕಾರ್ಪೊರೇಷನ್‌ಗಳು, ಬೋರ್ಡ್‌ಗಳು ಇವುಗಳಿಗೆಲ್ಲಾ ಎರಡು ವರ್ಷ ಎಕ್ಸ್‌ಂಪ್ಷನನ್ನು ಕೊಟ್ಟಿದ್ದೆವು ಈಗ ಮೂರು ವರ್ಷ ಕೊಡಿ ಎಂದು ಕೇಳುತ್ತಿದ್ದಾರೆ. ಈ ಸರ್ಕಾರಿ ವಲಯದಲ್ಲಿರುವ ಎಲ್ಲಾ ಉದ್ಯಮಗಳನ್ನು ಶಾಶ್ವತವಾಗಿ ಮುಚ್ಚುತ್ತಿರುವ ಸಂದರ್ಭದಲ್ಲಿ ಇದ್ಯಾಕೆ ಎಕ್ಸ್‌ಂಪನ್? ಈ ನಾಟಕಗಳೆಲ್ಲಾ ಏಕೆ? ಪರ್ಮನೆಂಟ್ ಆಗಿ ಒಂದು ಸಾರಿ ಎಕ್ಸ್‌ಂಪ್ಷನನ್ನು ತೆಗೆದುಕೊಂಡು ಬಿಟ್ಟರೆ ಒಳ್ಳೆಯದು. ಇದೊಂದು ಅನವಶ್ಯಕವಾಗಿರುವ ಕಸರತ್ತು ಸ್ವಾಮಿ ಗಾಳಿಯಲ್ಲಿ ಗುದ್ದಾಟ. ಆ ಲಾ ಸೆಕ್ರೆಟರಿಗೆ, ಲಾ ಮಿನಿಸ್ಟರ್‌ಗೆ, ಮತ್ತು ನಿಮಗೆ, ಅಸೆಂಬ್ಲಿಗೆ, ಟೈಮ್ ವೇಸ್ಟ್ ಮಾಡುವುದಕ್ಕೆ ಮಾಡಿರತಕ್ಕದ್ದು ಇದೊಂದು. ಇದಕ್ಕೆ ಹಲ್ಲೂ ಇಲ್ಲ. ಎಂಥದ್ದೂ ಇಲ್ಲ. ಅಲ್ಲಿ ಏನೂ ನಡೆಯುತ್ತಲೇ ಇಲ್ಲ. ಇಂಡಸ್ಟ್ರೀಯಲ್ ಅನ್‌ಎಂಪ್ಲಾಯ್‌ಮೆಂಟ್ ಕ್ರಿಯೇಟ್ ಮಾಡತಕ್ಕ ಇಂಡಸ್ಟ್ರೀಸ್ ಮಿನಿಸ್ಟರ್ ಮೈಸೂರು ಲ್ಯಾಂಪ್ಸ್ ಬಗ್ಗೆ ಭಾಷಣ ಮಾಡಿದರು. ಮೈಸೂರು ಲ್ಯಾಂಪ್ಸ್‌ನಲ್ಲಿ ಏನು ಪರ್ಚೇಸ್ ಮಾಡುತ್ತಿದ್ದಾರೆ? ಎಕ್ಸೆಫ್ಟ್ ಕೆಎಸ್‌ಆರ್‌ಟಿಸಿ ಇನ್ಯಾವುದಕ್ಕೂ ಸಹಿತ ಶಕ್ತಿ ಇಲ್ಲದೇ ಇರತಕ್ಕಂಥದ್ದೇ,

ಎಲ್ಲಾ ಮುಚ್ಚತಕ್ಕಂಥದ್ದು, ಸಂಬಳ ಕೊಡುವುದಕ್ಕೆ ಆಗದೇ ಇರತಕ್ಕಂಥದ್ದು. ಈಗೇನೋ ಬಜೆಟ್‌ನಲ್ಲಿ ನನಗೆ ತಿಳಿವಳಿಕೆಗೆ ಬಂದಿರುವ ಹಾಗೆ ಆ ಕಂಟ್ರಾಕ್ಟ್ ಕ್ಯಾರೇಜಸ್ ಆಕ್ಟ್‌ನ್ನು ಸಹಿತ ರಿಪೀಲ್ ಮಾಡಿಬಿಡುತ್ತಿದ್ದಾರಂತೆ. ಕಂಟ್ರಾಕ್ಟ್ ಕ್ಯಾರೇಜಸ್ ಆಕ್ಟ್ ರಿಪೀಲ್ ಮಾಡಿಬಿಟ್ಟರೆ ಕೆಎಸ್‌ಆರ್‌ಟಿಸಿಯನ್ನು ಇನ್ನು ನಾಲ್ಕು ವರ್ಷದಲ್ಲಿ ಎಳ್ಳುನೀರು ಹಾಕಿಬಿಟ್ಟು ಅದರ ತಿಥಿಯನ್ನೂ ಮಾಡಿಬಿಡಹುದು. ಆ ಸ್ಥಿತಿ ಇದೆ. ಇದನ್ನೆಲ್ಲಾ ಏಕೆ ತೆಗೆದುಕೊಂಡು ಬರುತ್ತಾರೋ ನನಗಂತೂ ಗೊತ್ತಾಗುತ್ತಿಲ್ಲ. ಇದಂತೂ ನಮ್ಮ ದೃಷ್ಟಿಯಲ್ಲಿ ಸಂಪೂರ್ಣವಾಗಿ ನಿಶ್ಯಕ್ತಿ. ಏನೂ ಇಲ್ಲ. ಏಕೆ ಈ ರೀತಿ ತಿದ್ದುಪಡಿಗಳನ್ನು ತೆಗೆದುಕೊಂಡು ಬರುತ್ತೀರೋ ನನಗಂತೂ ಅರ್ಥವಾಗುತ್ತಿಲ್ಲ.

ಶ್ರೀ ಪಿ.ಭೈರೇಗೌಡ (ವೇಮಗಲ್):- ಮಾನ್ಯ ಉಪಾಧ್ಯಕ್ಷರೇ, ನಾವು ಹಿಂದೆ ಈ ಕಾನೂನನ್ನು ಈ ಸಭೆಯಲ್ಲಿ ಮಂಡಿಸಿದಾಗ ನಮ್ಮ ನಿರೀಕ್ಷೆ ಏನಿತ್ತು ಎಂದರೆ ಸರ್ಕಾರಕ್ಕೆ ನೂರಾರು ಕೋಟಿ ರೂಪಾಯಿಗಳಷ್ಟು ಹಣ ಪೋಲು ಆಗುತ್ತಿರುವ ಹಣ ಉಳಿತಾಯವಾಗುತ್ತದೆ, ಸಾರ್ವಜನಿಕರ ಹಿತ ಅದರಿಂದ ಇನ್ನೂ ಹೆಚ್ಚಿನ ರೀತಿಯಲ್ಲಿ ಕಾಪಾಡಿದಂತಾಗುತ್ತದೆನ್ನುವ ನಿರೀಕ್ಷೆ ನಮಗಂತೂ ಕೂಡ ಇತ್ತು. ಆ ನಿರೀಕ್ಷೆ ಸಂಪೂರ್ಣವಾಗಿ ಇವತ್ತಿನ ದಿವಸ ಸುಳ್ಳಾಗಿದೆ. ಸ್ವಾಮಿ ಉದಾಹರಣೆಗೆ ಇಡೀ ರಾಜ್ಯದಲ್ಲಿ ಮತ್ತು ಇಡೀ ದೇಶದಲ್ಲೂ ಸಹಾ ಈ ತೆಂಗಿನ ಮರಕ್ಕೆ ನುಸಿ ಬಂತು. ಅದಕ್ಕಾಗಿ ನೀವು ಎಷ್ಟು ಔಷಧಿಯನ್ನು ಕೊಂಡುಕೊಂಡಿದ್ದೀರಿ ಸ್ವಾಮಿ? ಎಲ್ಲಿ ಹೋಯಿತು ನಿಮ್ಮ ಪಾರದರ್ಶಕ ಕಾನೂನು? ಆ ಕಾನೂನಿನ ಬಗ್ಗೆ ಇವತ್ತಿನ ದಿವಸ ಹೇಳಬೇಕಾಗಿದೆ. ಯಾವ ವಿಧಾನವನ್ನು ಅನುಸರಿಸಿದ್ದೀರಿ ನೀವು? ಔಷಧಿ ಕೊಂಡುಕೊಳ್ಳುವ ಸಂದರ್ಭದಲ್ಲಿ ಯಾವ ವಿಧಾನವನ್ನು ನೀವು ಅನುಸರಿಸಿದ್ದೀರಿ? ಆ ಕೊಂಡಿರುವ ಔಷಧಿ ಇವತ್ತಿನ ದಿವಸ ಏನಾಗಿದೆ? ಏಕೆ ಸಾರ್ವಜನಿಕರ ಕಣ್ಣಿಗೆ ಮಣ್ಣೆರಚುವ ಮಾತುಗಳನ್ನು ನೀವು ಹೇಳುತ್ತೀರಿ? ಕಾನೂನು ಇದ್ದರೂ ಸಹ ಕಾನೂನನ್ನು ಯಾವ ರೀತಿಯಲ್ಲಿ ಅದನ್ನು ಸಮಾಪನೆಗೊಳಿಸಬಹುದು ಎಂಬುದು ನಿಮಗೆ ಗೊತ್ತಿಲ್ಲ.'ಬೇಲಿಯೇ ಹೊಲವನ್ನು ಮೇಯತಕ್ಕ ಕೆಲಸ' ಸರ್ಕಾರದಿಂದ ಆಗುವುದಾದರೆ ಕಾನೂನುಗಳ ಅವಶ್ಯಕತೆಯಾದರೂ ಏನು ಇದೆ? ಇವತ್ತು ಸರ್ಕಾರಿ ಸ್ವಾಮ್ಯದ ಕೆಲವು ಸಂಸ್ಥೆಗಳಿವೆ. ಹಿಂದೆ ಒಂದು ಸಾರಿ ದೊಡ್ಡದಾಗಿ ಕರ್ನಾಟಕ ಕನ್ಸ್‌ಟ್ರಕ್ಷನ್ ಕಾರ್ಪೊರೇಷನ್ನನ್ನು ವೈಂಡ್ ಆಫ್ ಮಾಡುತ್ತಿದ್ದೇವೆ ಎಂದು ಹೇಳಿ ಏನೇನೊ ಆಯಿತು. ಇಲ್ಲೂ ಕೂಡ ಯಾರೋ ಮಾನ್ಯ ಸದಸ್ಯರು ಮೇಲ್ಮನೆಯಲ್ಲೂ ಕೂಡ ಕೆಲವು ಸದಸ್ಯರು ಹೇಳಿದರು. ಕರ್ನಾಟಕ ಕನ್ಸ್‌ಟ್ರಕ್ಷನ್ ಕಾರ್ಪೊರೇಷನ್‌ಗೆ ಹತ್ತಾರು ಕೋಟಿ ರೂಪಾಯಿಗಳ ಕೆಲಸವನ್ನು ಕೊಡುತ್ತಿದ್ದರು. ಅದರ ಮೂಲಕ ಯಾರಿಗೋ ಬೇಕಾದವರಿಗೆ ಕೆಲಸ ಕೊಡುವುದಕ್ಕೋಸ್ಕರ ಕರ್ನಾಟಕ ಕನ್ಸ್‌ಟ್ರಕ್ಷನ್ ಕಾರ್ಪೊರೇಷನ್‌ಗೆ ಕೊಡುತ್ತಿದ್ದರು ಎಂದು ಇರಬಹುದು. ಅದರ ಬಗ್ಗೆ ನಾನು, ಆ ಸತ್ಯಾಸತ್ಯತೆ ಬಗ್ಗೆ ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈಗ ಏನು ನಡೆಯುತ್ತಿದೆ ಸ್ವಾಮಿ? ಈಗ ನೀವು ರಸ್ತೆ ಕೆಲಸಗಳನ್ನು ತೆಗೆದುಕೊಂಡಿದ್ದೀರಿ. ಎಂಥದ್ದೋ ಸಿಆರ್‌ಎಫ್‌ನಲ್ಲಿ ತೆಗೆದುಕೊಂಡಿದ್ದು ಆಯಿತು. ಬೇರೆ ಬೇರೆ ಮೂಲಗಳಿಂದ ಹಣ ಒದಗಿಸಿದ್ದು ಆಯಿತು. ಕನ್‌ಸಲ್ಟೆಂಟ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಿದ್ದೀರಿ. ಎಸ್ಟಿಮೇಟ್ ಮಾಡುವುದಕ್ಕೆ ಒಬ್ಬ ಕನ್‌ಸಲ್ಟೆಂಟ್, ಕ್ವಾಲಿಟಿ ಕಂಟ್ರೋಲ್‌ಗೆ ಒಬ್ಬ ಕನ್‌ಸಲ್ಟೆಂಟ್, ಮತ್ತೆ ಬಿಲ್ ಮಾಡುವುದಕ್ಕೆ ಒಬ್ಬ ಕನ್‌ಸಲ್ಟೆಂಟ್ ಈ ರೀತಿಯಾಗಿ ಒಂದು ಕನ್‌ಸಲ್ಟೆಂಟ್‌ನ ಸೈನ್ಯವನ್ನೇ ನಿರ್ಮಾಣ ಮಾಡಿದರು. ಅವರಿಗೆಲ್ಲಾ ಎಷ್ಟು ಹಣ ಹೋಗಿದೆ? ಹಾಗಾದರೆ ನಿಮ್ಮ ಇಲಾಖೆಯಲ್ಲಿರುವ ಅಧಿಕಾರಿಗಳು ಮತ್ತೆ ಇಂಜಿನಿಯರುಗಳು ಇವರಿಗೇನು ಕೆಲಸವನ್ನು ಕೊಟ್ಟಿದ್ದೀರಿ? ಇದ್ಯಾಕೆ, ಈ ರೀತಿಯಾದ ಸುತ್ತು ಬಳಸತಕ್ಕ ಮಾರ್ಗವನ್ನು ಏಕೆ

ಅನುಸರಿಸುತ್ತಿದ್ದಾರೆಂದರೆ ಈ ಪಾರದರ್ಶಕ ಕಾನೂನನ್ನು ಮುರಿಯಬೇಕು. ಯಾವ ರೀತಿಯಾಗಿ ಇದನ್ನು ಬೈಪಾಸ್ ಮಾಡಬೇಕೆನ್ನುವ ದೃಷ್ಟಿಯಿಂದಲೇ ಇದೆಲ್ಲವನ್ನೂ ಕೂಡ ಮಾಡಿರತಕ್ಕಂಥದ್ದು. ಮತ್ತೆ ಇನ್ನೊಂದು ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಎಂದು ಇದೆ. ಈಗ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರೂ ಕೂಡ ಬಂದಿದ್ದಾರೆ.

3.40 ಪಿಎಂ

ನೀವು ಈಗ 30 ಲಕ್ಷ ರೂ.ಗಳ ಅಂದಾಜಿಗಿಂತ ಮೇಲೆ ಏನಾದರೂ ಕೂಡ ಕೆರೆ ಹೂಳು ಎತ್ತುವ ಕೆಲಸ ಇದ್ದರೆ ಆ ಕೆಲಸವನ್ನು ಕಡ್ಡಾಯವಾಗಿ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಮುಖಾಂತರವೇ ಮಾಡಬೇಕು ಎನ್ನತಕ್ಕ ಆಜ್ಞೆಯನ್ನು ಸರ್ಕಾರವೇ ಹೊರಡಿಸಿದೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಅದು ನಿಜ ಇರಬಹುದು ಅಥವಾ ಸುಳ್ಳು ಇರಬಹುದು. ಹಾಗಾದರೆ ನಿಮ್ಮ ಟ್ರಾನ್ಸ್‌ಫರೆನ್ಸಿ ಆಕ್ಟ್ ಏನಾಯಿತು? ಆ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಅಂದರೆ ಅದಕ್ಕೆ ಕೊಂಬು ಹುಟ್ಟಿದೆಯೇನು? ನನ್ನ ಕ್ಷೇತ್ರದಲ್ಲಿಯೇ ಲ್ಯಾಂಡ್ ಆರ್ಮಿ ಕಾರ್ಪೊರೇಷನ್‌ಗೆ ಕೆಲಸ ಪ್ರಧಾನಮಂತ್ರಿಯವರ ಗ್ರಾಮ ಸಡಕ್ ಯೋಜನೆಯಲ್ಲಿ 25 ಲಕ್ಷ ರೂಪಾಯಿಗಳ ಕೆಲಸ ಮಂಜೂರಾಯಿತು. ನಾನು ಬಹಳ ಸಂತೋಷದಿಂದ ಹಳ್ಳಿಗೆ ರಸ್ತೆ ಆಯಿತಲ್ಲಾ ಎಂದು ಇದ್ದರೆ, ಸ್ವಾಮಿ 25 ಲಕ್ಷ ರೂಪಾಯಿಗಳಲ್ಲಿ 2.5 ಕಿಲೋ ಮೀಟರ್ ರಸ್ತೆ ಮಾಡುತ್ತೇವೆಂದು ನನ್ನ ಹತ್ತಿರ ಎಸ್ಟಿಮೇಟ್ ತಂದರು. ನಾನು ತೆಗದು ಬಿಸಾಕಿದೆ, ಇದೆಲ್ಲಾ ಭದ್ರ, ಹುಷಾರಾಗಿರಿ, ಇದೆಲ್ಲಾ ಇಲ್ಲಿ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದೆ. ಅವರಿಗೆ ಟೆಂಡರ್ ಇಲ್ಲ, ಏನೂ ಇಲ್ಲ. ಟೆಂಡರ್ ಕರೆದು ಕಂಟ್ರಾಕ್ಟರ್ ಮುಖಾಂತರ ಮಾಡಿಸಿದರೆ ಸೇಲ್ಸ್ ಟ್ಯಾಕ್ಸ್ ಹಾಗೂ ಅಲ್ಲಿರತಕ್ಕ ಟ್ಯಾಕ್ಸ್‌ಸ್ ಅನ್ನು ಎಲ್ಲಾ ಅವನೇ ಕೊಡಬೇಕು. ರಾಯಲ್ಟಿ ಕೊಡುವುದಿದ್ದರೆ ಅವನೇ ಕೊಡಬೇಕು. ಇವೆಲ್ಲವೂ ಕೂಡ ಇವರಿಗೆ ಎಕ್ಸಂಪ್ಟೆಡ್. ಸೇಲ್ಸ್ ಟ್ಯಾಕ್ಸ್‌ನ್ನು ಎಸ್ಟಿಮೇಟಿಗೆ ಛಾರ್ಜ್ ಮಾಡುತ್ತಾರೆ. ಎಲ್ಲಾದರೂ ಉಂಟಾ ಸ್ವಾಮಿ ಏತಕ್ಕೆ ಹೀಗೆ? ಹಾಗಾದರೆ ಏತಕ್ಕೆ ಈ ಸಂಸ್ಥೆ ಇರಬೇಕು? 2.5 ಕಿಲೋಮೀಟರ್ ರಸ್ತೆಗೆ 25 ಲಕ್ಷ ರೂಪಾಯಿಗಳು ಎಂದು ಅಂದಾಜು ಮಾಡಿರತಕ್ಕದ್ದು. ಇದೆಲ್ಲಾ ಆಗುವುದಿಲ್ಲವೆಂದು ನಾನು ದಭಾಯಿಸಿದ ಮೇಲೆ ತಕರಾರು ಎತ್ತಿದ ಮೇಲೆ ಅದೇ ಸುಮಾರು 3.5/4 ಕಿಲೋ ಮೀಟರ್ ರಸ್ತೆಯನ್ನು ಅವರೇ ಮಾಡಿದ್ದಾರೆ. ಈ ಯಕ್ಷಿಣಿ ಹೇಗೆ ಆಯಿತು? ಈ ಮ್ಯಾಜಿಕ್ ಹೇಗೆ ಆಯಿತು? ಎನ್ನತಕ್ಕದ್ದನ್ನು ವಿಚಾರ ಮಾಡಬೇಕು. ಏತಕ್ಕೋಸ್ಕರ ಈ ಸಂಸ್ಥೆಗಳು ಇರಬೇಕು? ಅವರಿಗೆ ಇವತ್ತಿನ ದಿವಸ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಅವರು ಸಾರ್ವಜನಿಕರ ಹಿತವನ್ನು ಕಾಪಾಡಬೇಕಾಗಿದ್ದರೆ ಅದಷ್ಟು ಕಡಿಮೆ ದರದಲ್ಲಿ ಹೆಚ್ಚು ಕೆಲಸ ಆಗಬೇಕು. ಗುಣಮಟ್ಟದ ಕೆಲಸ ಆಗಬೇಕು ಎನ್ನತಕ್ಕದ್ದು ಆ ಉದ್ದೇಶ. ಇದೆಲ್ಲಾ ಕೂಡ ಕಂಟ್ರಾಕ್ಟರ್ಸ್ ಮತ್ತು ಸಪ್ಲೈಯರ್ಸ್ ಅವರು ಒಂದಾಗಿ ಬಿಟ್ಟರೆ ಅವರೆಲ್ಲಾ ಅವರವರಲ್ಲೇ ಹಂಚಿಕೊಳ್ಳುತ್ತಾರೆ. ಅದನ್ನು ಮುರಿಯಬೇಕು ಎನ್ನತಕ್ಕ ದೃಷ್ಟಿಯಿಂದಲೇ ಇಂತಹ ಸಂಸ್ಥೆಗಳನ್ನು ಇಟ್ಟುಕೊಂಡಿರತಕ್ಕದ್ದು. ಆದರೆ ಇವತ್ತು ಅದಕ್ಕೆ ಬದಲಾಗಿ ಅದಕ್ಕಿಂತ ಮೀರತಕ್ಕ ರೀತಿಯಲ್ಲಿ ಈ ಸಂಸ್ಥೆಗಳನ್ನು ಇಟ್ಟುಕೊಂಡು ಅವರಿಗೆಲ್ಲಾ ಕೂಡ ಟ್ರಾನ್ಸಫರೆನ್ಸಿ ಆಕ್ಟ್ ನೀವು ಅಪ್ಲೈ ಮಾಡಿದ್ದೀರಿ. ನೀವು ಲ್ಯಾಂಡ್ ಆರ್ಮಿಯನ್ನು ಮುಚ್ಚಲೇಬೇಕು ಎಂಬುದು ನನ್ನ ಆಗ್ರಹ. ಅದನ್ನು ಮುಚ್ಚದೇ ಇದ್ದರೆ, ಬೇರೆ ರೀತಿ ಕಂಟ್ರಾಕ್ಟರ್ಸ್ ಏನು ಇದ್ದಾರೆ, ಅದೇ ರೀತಿ ಅವರೂ ಕೂಡ ಟೆಂಡರ್‌ನಲ್ಲಿ ಬಿಡ್ ಮಾಡಿ ಕೆಲಸ ಮಾಡಲಿ. ಅವರ ಎಫಿಷಿಯೆನ್ಸಿಯನ್ನು ಅದರಲ್ಲಿ ತೋರಿಸಲಿ. ನಾನು ಅಧಿಕಾರಿಗಳನ್ನು ಕರೆದು ಏನ್ರಿ ಏಕೆ

ಇದೆಲ್ಲಾ ಎಂದು ಕೇಳಿದೆ. ನಮ್ಮ ಸಂಬಳ ಸಾರಿಗೆಯೆಲ್ಲಾ ಆಗಬೇಕಲ್ಲಾ ಸಾರ್ ಎಂದರು. ಇದನ್ನೆಲ್ಲ ಇವರು ಯಾರನ್ನೋ ಸಾಕುವುದಕ್ಕೆ, ಅಲ್ಲಿರತಕ್ಕವರನ್ನು ಸಾಕುವುದಕ್ಕೆ ಮಾಡಿರತಕ್ಕದ್ದು. ಸ್ವಾಮಿ ಲ್ಯಾಂಡ್ ಆರ್ಮಿ ಕಾರ್ಪೊರೇಷನ್‌ನಲ್ಲಿ ಒಬ್ಬರ ಮನೆ ರೈಡ್ ಆಗುತ್ತದೆ. ಲೋಕಾಯುಕ್ತದವರು ರೈಡ್ ಮಾಡಿದಂತಹ ಸಂದರ್ಭದಲ್ಲಿ ಸುಮಾರು 4 ಕೋಟಿ ರೂಪಾಯಿನಷ್ಟು ಅನ್‌ಅಕೌಂಟೆಡ್ ಆಸ್ತಿ ಸಿಗುತ್ತದೆ. ಇದಕ್ಕೋಸ್ಕರ ಈ ಸಂಸ್ಥೆಯನ್ನು ನೀವು ಇಟ್ಟುಕೊಂಡಿದ್ದೀರಾ? ಸಾರ್ವಜನಿಕರ ಹಣವನ್ನು ಪೋಲು ಮಾಡತಕ್ಕದ್ದು. ಈ ಹಣ ರಾಜ್ಯ ಸರ್ಕಾರದ್ದು ಕೂಡ ಅಲ್ಲ. ಕೇಂದ್ರ ಸರ್ಕಾರದಿಂದ ಬರತಕ್ಕ ಹಣವನ್ನು ಯಾರ್ಯಾರಿಗೋ ದಾರಿಯಲ್ಲಿ ಹೋಗತಕ್ಕವರಿಗೆ ಕೇಳಿದವರಿಗೆಲ್ಲಾ ಹಂಚುವುದಕ್ಕೆ ಈ ಸಂಸ್ಥೆಯನ್ನು ಇಟ್ಟುಕೊಂದಿದ್ದೀರಾ? ಎಲ್ಲಿದೆ ನಿಮ್ಮ ಟ್ರಾನ್ಸಫರೆನ್ಸಿ ಆಕ್ಟ್? ಇರತಕ್ಕದ್ದು ಕಾಗದದಲ್ಲಿ ಇರಬಹುದು. ಇದು ಬಹಳ ಲಕ್ಷಣವಾಗಿ ಪ್ರಿಂಟ್ ಆಗಿದೆ; ಬಹಳ ಚೆನ್ನಾಗಿ ಕಾಣುತ್ತದೆ.

ಶ್ರೀ ಎಸ್.ಎಚ್. ಪುಟ್ಟರಂಗನಾಥ್:- ಇದು ಏನಾಗಿದೆ ಅಂದರೆ ಕಂಟ್ರಾಕ್ಟರ್ಸ್ ಅವರು ನೇರವಾಗಿ ಕೆಲಸ ಮಾಡುವುದಿಲ್ಲ, ಸಬ್ ಕಂಟ್ರಾಕ್ಟರ್ಸ್ ಮುಖಾಂತರ ಕೆಲಸ ಮಾಡಿಸುತ್ತಾರೆ.

(ಗೊಂದಲ)

ಶ್ರೀ ಎಸ್.ಎಚ್. ಪುಟ್ಟರಂಗನಾಥ್:- ಕಂಟ್ರಾಕ್ಟರ್ ನೇರವಾಗಿ ಕೆಲಸ ಮಾಡದೇ ಬೇರೆಯವರಿಂದ ಮಾಡಿಸುತ್ತಾರೆ. ಹಾಗಾದರೆ ಈ ಸಂಸ್ಥೆಯನ್ನು ಇಟ್ಟುಕೊಂಡು ಏನು ಪ್ರಯೋಜನ?

ಶ್ರೀ ಸಿ.ಭೈರೇಗೌಡ:- ನೀವು ಬೇಕಾದರೆ ಬನ್ನಿ. ಅಲ್ಲಿ ಯಾವ ರೀತಿ ಕೆಲಸವಾಗಿದೆ ಎಂಬುದನ್ನು ನೋಡಿ. ಇವತ್ತಿನ ದಿವಸ ನೀವು ಒಬ್ಬ ಮಂತ್ರಿಯಾಗಿ ಮಾತನಾಡಬೇಡಿ. ನೀವು ಸಾರ್ವಜನಿಕರಲ್ಲಿ ಒಬ್ಬರಾಗಿ ಮಾತನಾಡುವುದಿದ್ದರೆ ಉತ್ತರ ಕೊಟ್ಟರೆ ನಾನು ಒಪ್ಪುತ್ತೇನೆ. ಆದರೆ ಇವತ್ತಿನ ದಿವಸ ಸಾರ್ವಜನಿಕರ ಹಿತ, ಸಾರ್ವಜನಿಕರ ಹಿತಕ್ಕೆ ಎಂದು ಏನು ಉದ್ದೇಶ ಇತ್ತು ಅದು ಇದರಿಂದ ನೆರವೇರುತ್ತಾ ಇಲ್ಲ. ಇವರಿಗೆ ಏಕೆ ಟ್ರಾನ್ಸ್‌ಫರೆನ್ಸಿ ಆಕ್ಟ್ ಇವನ್ನೆಲ್ಲಾ ಅಮೆಂಡ್‌ಮೆಂಟ್ ಮಾಡತಕ್ಕದ್ದು. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕದ್ದು ಇಲ್ಲ. ಅವರು ಎಲ್ಲೆಲ್ಲಿ ಕೆಲಸ ಮಾಡಿಸಿದ್ದಾರೆ ಅಲ್ಲಿ ಆಮೇಲೆ ಅವರಿಗೆ 17 ಪರ್ಸೆಂಟ್ ಹಣವನ್ನು ಎಸ್ಟಿಮೇಟ್‌ನಲ್ಲಿ ಕೊಡಬೇಕಂತೆ. ಎಸ್ಟಿಮೇಟೆಡ್ ಕಾಸ್ಟ್‌ನಲ್ಲಿ ಅವರು ಕ್ಲೀನಾಗಿ ಎಲ್ಲವನ್ನೂ ಬರೆಯುತ್ತಾರೆ. ನಮ್ಮ ಎಸ್ಟಾಬ್ಲಿಷ್‌ಮೆಂಟ್ ಛಾರ್ಜಸ್ ಇಷ್ಟು ಟ್ಯಾಕ್ಸ್‌ಸ್ ಇಷ್ಟು, ಮತ್ತು ಇದೆಲ್ಲವನ್ನೂ ಕೊಟ್ಟು ಅವರ ಮುಖಾಂತರ ಮಾಡಿಸುವುದಾದರೆ ಟ್ರಾನ್ಸಫರೆನ್ಸಿ ಆಕ್ಟ್ ಏಕೆ? ಬೇರೆಯವರಿಗೆ ಅದೇ ರೀತಿ ಹೇಳಿ ಕಂಟ್ರಾಕ್ಟರ್‌ಗೂ ಕೂಡ ಅದೇ ರೀತಿ ಮಾಡಿ. ಎಲ್ಲಿದೆ ಸಾರ್ವಜನಿಕರ ಹಿತ? ಈ ಸಂಸ್ಥೆಗಳಲ್ಲಿ ಸಾರ್ವಜನಿಕರ ಹಿತವನ್ನು ಕಾಪಾಡತಕ್ಕದ್ದು ಎಲ್ಲಿದೆ? 2.5 ಕಿಲೋ ಮೀಟರ್ ರಸ್ತೆಯನ್ನು ಕೆಲಸ ಮಾಡಲು ಹೋಗಿ ಮೂರು-ಮೂರೂವರೆ ಕಿಲೋ ಮೀಟರ್ ರಸ್ತೆಯವರೆಗೆ ಅವರೇ ಕೆಲಸ ಮಾಡಿದ್ದಾರೆಂದರೆ, ಎಲ್ಲಿಯವರೆಗೆ ಸಾರ್ವಜನಿಕರ ಹಿತಕ್ಕೆ ಮಾರಕ ಆಗತಕ್ಕ ರೀತಿಯಲ್ಲಿ ಈ ಸಂಸ್ಥೆಗಳು ಕೆಲಸ ಮಾಡುತ್ತಿವೆ ಎನ್ನುವುದಕ್ಕೆ ಇದೊಂದು ಉದಾಹರಣೆ ಮಾತ್ರ. ಈ ರೀತಿಯಾಗಿ ಹುಡುಕುತ್ತಾ ಹೊದರೆ ಅಂಥದ್ದು ಇನ್ನೂ ಎಷ್ಟು ಸಿಗುತ್ತದೋ? ಅದನ್ನು ನಾವು ಊಹಿಸುವುದಕ್ಕೂ ಕಷ್ಟ. ಆದ್ದರಿಂದ ನೀವು ತೋರಿಕೆಗೋಸ್ಕರ ಇದು ಇದೆ ಎಂದು ಹೇಳುವುದು ಬೇಡ. ಒಂದು ಕಾನೂನು ಇದೆ ಎಂದು ಕಾನೂನಿಗೋಸ್ಕರ ಹೇಳತಕ್ಕದ್ದು ಬೇಡ, ಆ ರೀತಿ ಆಗುವುದು ಬೇಡ. ಆದರೆ ವಾಸ್ತವವಾಗಿ ಕಾರ್ಯಗತ ಆಗತಕ್ಕ

ರೀತಿಯಲ್ಲಿ ನೀವು ಮಾಡಿದರೆ ನಾವಂತೂ ಕೂಡ ಮೆಚ್ಚುತ್ತೇನೆ. ಆದರೆ ಇದರಲ್ಲಿ ನೀವು ತಂದಿರತಕ್ಕ ತಿದ್ದುಪಡಿಯಲ್ಲಿ ಸಾರ್ವಜನಿಕರ ಹಿತ ಎಲ್ಲಿದೆ? ಅದು ಎರಡು ವರ್ಷದಿಂದ ಮೂರು ವರ್ಷದವರೆಗೆ ಎಕ್ಸಂಪ್ಷನ್. ಏಕೆ ಸ್ವಾಮಿ, ಏಕೆ ಕೊಡಬೇಕು? ಯಾವ ಕಾರಣದಿಂದ ಕೊಡಬೇಕು? ಏನು ಆಧಾರ ಇದೆ ಇದಕ್ಕೆ? ಸರ್ಕಾರೀ ಸ್ವಾಮ್ಯದ ಸಂಸ್ಥೆಗಳು ಏನಿವೆ ಅವು ಎಲ್ಲವೂ ಸರ್ಕಾರೀ ಅಧಿಕಾರಿಗಳ ಮೂಲಕ ನಡೆಯಬೇಕು ಮತ್ತು ನೀವು ನಾಮನಿರ್ದೇಶನ ಮಾಡಿರತಕ್ಕವರ ಮೂಲಕ ಕೆಲಸ ಕಾರ್ಯಗಳು ನಡೆಯಬೇಕು. ಆದರೆ ಇದರಲ್ಲಿ ಸಾರ್ವಜನಿಕರ ಹಿತ ಕಾಪಾಡತಕ್ಕದ್ದು ಎಲ್ಲಿ ಅಡಗಿದೆ? ಎರಡು ವರ್ಷದಿಂದ ಮೂರು ವರ್ಷಕ್ಕೆ ಅವಧಿಯನ್ನು ನೀವು ವಿಸ್ತರಿಸಿದರೆ ಇದರಲ್ಲಿ ಸಾರ್ವಜನಿಕರ ಹಿತ ಎಲ್ಲಿ ಅಡಗಿದೆ? ಸಾರ್ವಜನಿಕರ ಹಿತಕ್ಕೆ ಮಾರಕವಾಗುವಂತಹ ರೀತಿಯಲ್ಲಿ ಕಾನೂನು ಕೂಡ ಕಾರ್ಯಗತವಾದರೆ, ಇವತ್ತು ತಿದ್ದುಪಡಿ ಸಹ ಸಾರ್ವಜನಿಕರ ಹಿತಕ್ಕೆ ಮಾರಕ ಆಗತಕ್ಕಂಥ ತಿದ್ದುಪಡಿಯನ್ನೂ ಕೂಡ ತಂದು ಇದಕ್ಕೆ ಒಪ್ಪಿಗೆ ಕೊಡಬೇಕೆಂದರೆ ನಾವಂತೂ ಒಪ್ಪಿಗೆ ಕೊಡುವುದಕ್ಕೆ ಖಂಡಿತ ಸಾಧ್ಯ ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ(ಪುತ್ತೂರು):- ಮಾನ್ಯ ಉಪಾಧ್ಯಕ್ಷರೆ, ಬಹಳ ವಿಚಿತ್ರವಾದಂತಹ ತಿದ್ದುಪಡಿಗಳನ್ನು ಈ ಸರ್ಕಾರ ತರುತ್ತಿದೆ. ನಾನು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮುಖಾಂತರ ಕೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಈ ಅಧಿನಿಯಮ ಬಂದದ್ದು ಯಾವಾಗ? 1999ರ ಅಧಿನಿಯಮ 2000ದ ಕರ್ನಾಟಕದ ಅಧಿನಿಯಮ ಬಂದದ್ದು; ಅಂದರೆ ತಾವು ತಂದದ್ದು ಯಾವಾಗ 2001ರಲ್ಲಿ. ಈ ವರ್ಷ 2003. ನಾನು ಕೇಳುತ್ತಿರುವಂತಹದ್ದು ಎಂದರೆ ಮೊನ್ನೆ ಮೊನ್ನೆ ಅಧಿನಿಯಮ ತಂದಿದ್ದೀರಿ. ಈಗ ಅವಧಿಗಳನ್ನು ವಿಸ್ತರಣೆ ಮಾಡುತ್ತಿದ್ದೀರಿ. ಬರುವ ವರ್ಷ ಕೂಡ ಏನಾದರೂ ಇದಕ್ಕೆ ತಿದ್ದುಪಡಿ ತರುವಂತಹ ಪ್ರಯತ್ನಗಳು ಉಂಟಾ? ಈಗ ಮೂರು ವರ್ಷ ಆಯಿತು. ಬರುವ ವರ್ಷ ನಾಲ್ಕು ವರ್ಷ, ಐದು ವರ್ಷ ಆಯಿತು ಎಂದು ಹೀಗೆ ತಿದ್ದುಪಡಿ ತರುವುದಕ್ಕೆ ಆಗುತ್ತದೆಯೇ? ಇಷ್ಟು ಶೀಘ್ರವಾಗಿ ತಿದ್ದುಪಡಿ ತರುವ ಉದ್ದೇಶವೇನು? ನಾನು ಕೇಳುವುದು ಎಂದರೆ ಒಂದು ಸರ್ಕಾರ ಯಾವುದಾದರೂ ಒಂದು ಅಧಿನಿಯಮಗಳನ್ನು ತರುವಂಥದ್ದರಲ್ಲಿ ಎಷ್ಟು ಪಾರದರ್ಶಕತೆ ಇದೆ ಎನ್ನುವುದನ್ನು ತೋರಿಸುತ್ತದೆ. ಏಕೆಂದರೆ ಕೇವಲ ಒಂದು ವರ್ಷ ಎರಡು ವರ್ಷದ ಅವಧಿಗಳಲ್ಲಿ ಮತ್ತೆ ಇದರ ಅವಧಿ ವಿಸ್ತರಣೆ ಮಾಡಬೇಕು ಎಂದು ಹೇಳುವಂತಹ ಪ್ರಯತ್ನಗಳನ್ನು ನೀವು ಮಾಡುತ್ತಿದ್ದರೆ ಬಹುಶಃ ಇನ್ನೇನಾದರೂ ಹೇಳಿದರೆ ಬರುವ ವರ್ಷಕ್ಕೆ ನಾಲ್ಕು ವರ್ಷ ಆಯಿತು; ಅವಧಿ ವಿಸ್ತರಣೆ ಮಾಡಬೇಕೆಂದು ಹೇಳುತ್ತೀರಿ. ವರ್ಷಂಪ್ರತಿ ನೀವು ತಿದ್ದುಪಡಿಗಳನ್ನು ಇದಕ್ಕೆ ತರುವಂತಹ ಪ್ರಯತ್ನಗಳನ್ನು ಮಾಡುವಂತಹದು ಆಗಬಹುದು ಎಂಬುದು ನನ್ನ ಅನಿಸಿಕೆ. ಪ್ರಾಯಶಃ ಮೂರು ವರ್ಷ ಎಂದು ತಿದ್ದುಪಡಿ ತರುವುದರಲ್ಲಿ ಯಾವುದೇ ರೀತಿಯಲ್ಲಿ ಕೂಡ ಪಾರದರ್ಶಕತೆಯನ್ನು ತೋರಿಸಿದ ಹಾಗೆ ಆಗುವುದಿಲ್ಲ. ಈ ಬಗ್ಗೆ ತಾವು ಸದನಕ್ಕೆ ತಿಳಿಸಬೇಕು; ಇಡೀ ರಾಜ್ಯಕ್ಕೆ ತಿಳಿಸಬೇಕು. ಈ ತಿದ್ದುಪಡಿ ತರುವುದರ ಮುಖಾಂತರ ಏನೋ ಒಂದು ನಿರ್ದಿಷ್ಟವಾಗಿ ಯಾವುದೋ ವಿಚಾರದಲ್ಲಿ ಸ್ವಲ್ಪ ಸ್ಪಷ್ಟತೆಯನ್ನು ಎಲ್ಲರಿಗೂ ಕೊಡುತ್ತೇವೆಂದು ಹೇಳುವುದನ್ನು ತೋರಿಸಿ ಕೊಡಬೇಕು. ಇಲ್ಲ ಎಂದರೆ ನೀವು ಪುನಃ ಬರುವ ವರ್ಷ ತಿದ್ದುಪಡಿ ತರಲೇಬೇಕು. ಇಲ್ಲದೆ ಬೇರೆ ಉಪಾಯವಿಲ್ಲ. ಏಕೆಂದರೆ 1999ರದ್ದು 2000-2001ರಲ್ಲಿ ತಂದಿದ್ದೀರಿ ಇದು ಎರಡು ವರ್ಷದ್ದು. ಈಗ ಮೂರು ವರ್ಷದ್ದು. ಒಂದೇ

ವರ್ಷದಲ್ಲಿ ತರುತ್ತಿದ್ದೀರಿ. ಇದು ಏಕೆಂದು ಹೇಳುವುದನ್ನು ಸ್ಪಷ್ಟೀಕರಣ ಮಾಡಬೇಕು. ಇಲ್ಲದಿದ್ದರೆ ಈ ತಿದ್ದುಪಡಿಗೆ ನಮ್ಮ ಒಪ್ಪಿಗೆ ಇಲ್ಲ ಎನ್ನುವುದನ್ನು ಮಾನ್ಯ ಸಚಿವರು ತಿಳಿದುಕೊಳ್ಳಬೇಕು.

+ಶ್ರೀ ಎ.ರಾಮದಾಸ್ (ಕೃಷ್ಣರಾಜ):– ಮಾನ್ಯ ಉಪಾಧ್ಯಕ್ಷರೆ, ಬಿಲ್ ನೋಡುವುದಕ್ಕೆ ಎರಡು ಪೇಜ್ ಇದೆ. ಅಷ್ಟೆ. ನಾಲ್ಕು ಲೈನ್ ಇದೆ. ಆದರೆ ಅದರ ಹಿಂದೆ ಅಡಗಿರುವಂತಹ ವ್ಯವಸ್ಥೆಗಳು ಏನು ಇದೆ. ಇದನ್ನು ನೋಡಿ ಆಡಳಿತ ಮಾಡುವುದನ್ನು ಯಾರಾದರೂ ಕಲಿಯಬೇಕು ಎಂದರೆ ನಿಮ್ಮಿಂದ ಕಲಿಯಬೇಕು ಎಂದು ನನಗೆ ಹೊಸ ಶಾಸಕನಾಗಿ ಈಗ ಅನ್ನಿಸುತ್ತಿದೆ. ಟ್ರಾನ್ಸ್‌ಫರೆನ್ಸಿ ಆಕ್ಟ್ ಬಂದಂತಹ ಸಮಯದಲ್ಲಿ ಎಷ್ಟು ಪ್ರಚಾರ ಸಿಕ್ಕಿತು ಎಂದರೆ ಯಾವ ಪತ್ರಿಕೆಗಳಲ್ಲಿ ನೋಡಿದರೂ ಸಹ ಮುಖಪುಟದಲ್ಲಿ ಅದೇ ವಿಷಯ; ಟ್ರಾನ್ಸ್‌ಫರೆನ್ಸಿ ಆಕ್ಟ್, ನಮ್ಮ ಸರ್ಕಾರಕ್ಕೆ ಪಾರದರ್ಶಕತೆ ಇದೆ. ಬಹಳ ಒಳ್ಳೆಯ ವಿಚಾರಗಳನ್ನು ಕೊಡುತ್ತಿದ್ದೇವೆ. ಎಲ್ಲೂ ತರದೇ ಇರುವಂತಹ ಒಂದು ಪಾರದರ್ಶಕತೆಯನ್ನು ತಂದು ನಮ್ಮ ಸರ್ಕಾರದ ಎಲ್ಲಾ ಅಂಗಾಂಗಗಳನ್ನೂ ತೋರಿಸುತ್ತಿದ್ದೇವೆ. ಈ ಎಲ್ಲಾ ವಿಚಾರಗಳೂ ಕೂಡ ಬಹಳಷ್ಟು ಚೆನ್ನಾಗಿ ಪತ್ರಿಕೆಗಳಲ್ಲಿ ಬಂತು. ಇದನ್ನು ನಾನು ಈಗ ತಾನೇ ಎಲ್ಲಿ ಸಿಗುತ್ತದೆ ಎಂದು ಹುಡುಕುತ್ತಿದ್ದೆ. ಪ್ರಜಾವಾಣಿ ಪತ್ರಿಕೆಯ ಒಂದು ವಿಚಾರವನ್ನು ಓದಿದ ಮೇಲೆ ನನಗೆ ಅನ್ನಿಸುತ್ತದೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಬಿಲ್ ತರುವುದಿಲ್ಲ, ನಾನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆಂದು ಹೇಳುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ.

"ಟೆಂಡರ್ ಇಲ್ಲದೇ ಗುತ್ತಿಗೆ ನೀಡಿದರೆ ಜೈಲು" "ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಲ್ಲಿ ಟೆಂಡರ್ ಕರೆಯದೇ ಅಧಿಕಾರಿಗಳು ಗುತ್ತಿಗೆದಾರರಿಗೆ ಕೆಲಸ ಕೊಟ್ಟರೆ ಜೈಲಿಗೆ ಹೋಗಬೇಕಾಗುತ್ತದೆ. ಹೀಗೆ ಮಾಡಿದ ಅಧಿಕಾರಿಗಳನ್ನು ಕಛೇರಿಯ ಬದಲಿಗೆ ಜೈಲಿನಲ್ಲಿ ನೋಡಬಹುದು ಎಂದು ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣ ಅವರು ಎಚ್ಚರಿಕೆ ನೀಡಿದರು. ಸಾರ್ವಜನಿಕವಾಗಿ ಟೆಂಡರ್‌ನಿಂದ ಭ್ರಷ್ಟಾಚಾರ ಬಹಿರಂಗವಾಗಿ ಯಾರು ಬೇಕಾದರೂ ಕೋರ್ಟಿಗೆ ಹೋಗಬಹುದು. ಭ್ರಷ್ಟ ಅಧಿಕಾರಿಗಳು ನ್ಯಾಯಾಲಯದಲ್ಲಿ ಸಮಜಾಯಿಷಿ ಕೊಡಬೇಕಾಗುತ್ತದೆ ಎಂದು ಅವರು ತಿಳಿಸಿದರು." ಇದು ಒಂದು ಭಾಗ. ಇದನ್ನು ಹೇಳಿ ಟ್ರಾನ್ಸ್‌ಫರೆನ್ಸಿ ಆಕ್ಟನ್ನು ನಮ್ಮ ಸರ್ಕಾರ ತಂದಿದೆ. ಅದು ಲೋಕಲ್ ಬಾಡಿಗಳೆ ಇರಲಿ, ಮತ್ತು ಅದಕ್ಕೆ ಸಂಬಂಧಪಟ್ಟಿರತಕ್ಕಂಥ ಯಾವುದೇ ಬೋರ್ಡ್ ಇರಲಿ, ಇನ್ನು ಯಾವುದರಲ್ಲೇ ಆದರೂ ಕೂಡ ಇನ್ನು ಮುಂದೆ ಯಾರಾದರೂ ಸಹ ಟೆಂಡರ್ ಕರೆಯದೇ ಯಾರಾದರೂ ಇದ್ದರೆ ಅವರನ್ನು ಜೈಲಿಗೆ ಕಳುಹಿಸಬೇಕು ಎನ್ನುವ ಮಾತನ್ನು ನೋಡಿ ನಾನು ತುಂಬಾ ಸಂತೋಷಪಟ್ಟೆ. ಇಂತಹ ಮುಖ್ಯಮಂತ್ರಿಗಳೂ ನಮ್ಮ ರಾಜ್ಯದಲ್ಲಿ ಇದ್ದಾರಲ್ಲ ಎಂದು ಸಂತೋಷವಾಯಿತು. ಆದರೆ ಇವರು ಬಿಲ್ ತರುತ್ತಿರುವುದು ನೋಡಿದರೆ ಇದರ ಹಿಂದೆ ಏನು ಇದೆ, ಇದನ್ನು ಮುಚ್ಚಿ ಹಾಕುವುದಕ್ಕೋಸ್ಕರವಾಗಿ ಪ್ರಯತ್ನ ನಡೆಯುತ್ತಿದೆಯೇ? ಮಾನ್ಯ ಕಾಗೋಡು ತಿಮ್ಮಪ್ಪನವರ ಕೈಯಲ್ಲಿ ಈ ಬಿಲ್ ಏಕೆ ಮಂಡಿಸುತ್ತಿದ್ದಾರೆ ಎಂದು ನನಗೆ ಈಗ ಭಯ ಆಯಿತು. ಕಾರಣ, ಇಲ್ಲಿ ನಿಮ್ಮ ಮುಂದೆ ಒಂದು ಅಂಶವನ್ನಿಡಲು ನಾನು ಬಯಸುತ್ತೇನೆ. ಟೆಂಡರ್ ಬಂತು, ಅಂದರೆ ಯಾವ ದಿನ? ನಮ್ಮ ಪ್ರಕಾರ ಎರಡು ವರ್ಷಗಳ ಕಾಲದಲ್ಲಿ 19.8.02ಕ್ಕೆ ಇದು ಜಾರಿಗೆ ಬಂತು. 2002ನೇ ಇಸವಿಯ ಆಗಸ್ಟ್ ತಿಂಗಳಿಗೆ ಇದು ಮುಗಿಯುವ ವ್ಯವಸ್ಥೆಯಾಗಿತ್ತು. ಇವರ ಪ್ರಕಾರ ಯಾವುದೇ ಒಂದು ಕೆಲಸವನ್ನು ಅದು ಯಾರೇ ಇರಲಿ ಟೆಂಡರ್ ಕರೆದು ಕೊಡಬೇಕೆನ್ನುವ

ಬಹಳಷ್ಟು ವಿಚಾರಗಳಿತ್ತು. ಈ ಕುರಿತು ಒಂದು ಉದಾಹರಣೆಯನ್ನು ನಿಮ್ಮ ಮುಂದಿಡಲು ನಾನು ಬಯಸುತ್ತೇನೆ. ಈ ಒಂದು ಷೆಲ್ಟರ್ ಅನ್ನು ತಾವು ತರುವಂಥಾದ್ದು ಸಾರ್ವಜನಿಕ ಸಂಸ್ಥೆ ಹಾಗೂ ಇನ್ನಿತರ ಬೇರೆ ಬೇರೆ ಸಂಸ್ಥೆಗಳಿಗೆ ಸಹಾಯ ಮಾಡೋಣವೆಂಬ ದೃಷ್ಟಿಯಿಂದ ಹೋಗುತ್ತೀರಿ. ಆದರೆ, ನಮ್ಮಲ್ಲಿರುವ ಅಧಿಕಾರಿಗಳು ಯಾವ ರಾಜಕಾರಣಿಗಳನ್ನು ಕೂಡ ಮೀರಿಸುವಂಥ ಜ್ಞಾನವುಳ್ಳವರಾಗಿದ್ದಾರೆ ಎಂಬುದನ್ನು ಮಾತ್ರ ತಾವು ಮರೆಯಬೇಡಿ. ಕೇವಲ ಒಂದು ಇಲಾಖೆಯನ್ನು ಉದಾಹರಣೆಗೆ ತೆಗೆದುಕೊಂಡರೆ, ನಿಮ್ಮ ಟ್ರಾನ್ಸ್‌ಫರೆನ್ಸಿ ಆಕ್ಟ್ ಜಾರಿಗೆ ಬಂತು; ಬಂದಾಗ ಎರಡು ವರ್ಷಗಳ ಕಾಲ ಅದಕ್ಕೆ ಸಮಯವನ್ನು ಕೊಟ್ಟಿರಿ. ಅಂದರೆ ಇರುವಂಥ ಸಂಸ್ಥೆಗಳಿಗೆ ಎರಡು ವರ್ಷಗಳ ಕಾಲ ವಿನಾಯಿತಿಯನ್ನು ಕೊಟ್ಟಿರಿ. ಹೀಗೆ ಕೊಟ್ಟಂಥ ಸಮಯದಲ್ಲಿ ಏನಾಯಿತೆಂದರೆ, ಬಳ್ಳಾರಿ ನಗರ ನೀರು ಸರಬರಾಜು ಯೋಜನೆ, ಹಳ್ಳೀಪುರ ಹೊಸ ಕೆರೆ ರಿಪೇರಿ ಮತ್ತು ಮೋಖಾ ಹೊಸ ಕೆರೆ ನಿರ್ಮಾಣ. ಇದು ಯಾವಾಗಿನ ಕೆಲಸ? 1998ರಲ್ಲಿ ಈ ಕೆಲಸವನ್ನು ಎಂಟ್ರಸ್ಟ್ ಮಾಡಿದರು. ಆಗ ಯಾವುದೇ ಟ್ರಾನ್ಸ್‌ಫರೆನ್ಸಿ ಆಕ್ಟ್ ಇರಲಿಲ್ಲ. ಯಾರಿಗೆ ಎಂಟ್ರಸ್ಟ್ ಮಾಡಿದರು? ಬೇರೆಯವರಿಗೆ ವಹಿಸಿಕೊಡಲಿಲ್ಲ. ಅದನ್ನು ವಹಿಸಿಕೊಟ್ಟಿದ್ದು ಕೆಎಸ್‌ಸಿಸಿಗೆ. ಕೆಎಸ್‌ಸಿಸಿಯವರು ಕೆಲಸ ತೆಗೆದುಕೊಂಡರು. ಅದರ ಮೊತ್ತ 3.1 ಕೋಟಿ ರೂಪಾಯಿಗಳು. ಕೆಲಸ ವಹಿಸಿಕೊಂಡ ಬಳಿಕ ಅದನ್ನು ಅಬ್ದುಲ್ಲಾ ಎನ್ನುವ ವ್ಯಕ್ತಿಗೆ ಸಬ್‌ಲೀಸ್ ಕೊಟ್ಟರು. ಅವರಿಗೆ ವಹಿಸಿಕೊಟ್ಟು ಕೆರೆ ರಿಪೇರಿಯಾದ ನಂತರ ನೀರು ತುಂಬಿಸಲು ಹೋಗಿ ಟ್ಯಾಂಕ್ ಒಡೆದು ಆ ಸಮಯದಲ್ಲಿ ಏನೂ ಆಗಲಿಲ್ಲವೆಂದು ಪೈನಲ್ ಬಿಲ್ ಮಾಡಬಾರದೆಂದು ಅದನ್ನು ಹಾಗೇ ಇಟ್ಟಿದ್ದರು. ಟ್ರಾನ್ಸ್‌ಫರೆನ್ಸಿ ಆಕ್ಟ್ ಬಂತು. ಬಂದಾಗ ಅವರಿಗೆ ತುಂಬಾ ಸಂತೋಷವಾಗಿತ್ತು. ಏಕೆಂದರೆ, 3.1 ಕೋಟಿ ರೂಪಾಯಿಗಳಿದ್ದಂಥ ಯೋಜನೆಯನ್ನು ಇಪ್ಪತ್ತು ಕೋಟಿ ರೂಪಾಯಿಗಳಿಗೆ ಏರಿಸಲಾಯಿತು. ಇಪ್ಪತ್ತು ಕೋಟಿ ರೂಪಾಯಿಗಳಿದ್ದದ್ದನ್ನು ನಲವತ್ತಾರು ಕೋಟಿ ರೂಪಾಯಿಗಳಿಗೆ ಏರಿಸಲಾಯಿತು. ನಲವತ್ತಾರು ಕೋಟಿ ರೂಪಾಯಿಗಳ ಈ ಕೆಲಸವನ್ನು ಟೆಂಡರ್ ಕರೆದು ಕೊಡಬೇಕು. ಯಾರು ಹೇಳಿದರು? ನಮ್ಮಲ್ಲಿರುವ ಪ್ರಾಮಾಣಿಕ ಅಧಿಕಾರಿಯೊಬ್ಬರು ಪತ್ರ ಬರೆಯುತ್ತಾರೆ. ಈ ಕೆಲಸದ ಕುರಿತು ರಾಜ್ಯದ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿದ್ದೇವೆ, ಈ ಕೆಲಸವನ್ನು ನೇರವಾಗಿ ಎಂಟ್ರಸ್ಟ್ ಮಾಡಬಾರದು. ಟ್ರಾನ್ಸ್‌ಫರೆನ್ಸಿ ಆಕ್ಟ್‌ನಡಿಯಲ್ಲಿ ಟೆಂಡರ್ ಕರೆದು ಈ ಕೆಲಸವನ್ನು ಎಂಟ್ರಸ್ಟ್ ಮಾಡಬೇಕೆಂದು From the Secretary, Govt. of Karnataka, Urban Development Department, Bangalore: Entrustment of work directly to the Govt. of India undertakings Engineering Projects India Ltd., and Hindustan Steel Corporation Ltd.: With reference to your letter dtd. 3.7.2000 on the above-subject, I am directed to inform that the order of the Hon'ble Chief Minister has been obtained in this matter. The normal procedure of calling for open tender and finalizing the contract may be followed in this matter."ಬಹಳ ಒಳ್ಳೆಯ ಪತ್ರ ಬರೆದರು. ಇದರ ಪರಿಣಾಮವೇನಾಯಿತು?exemption ಕೊಟ್ಟರಿ, ಪತ್ರವನ್ನು ಹೆಚ್‌ಎಸ್‌ಸಿಎಲ್‌ಗೆ ಬರೆದರು. ಅವರೂ ಕೂಡ ಪತ್ರ ಬರೆದು, ನಾವೂ ಕೂಡ ಟೆಂಡರ್‌ನಲ್ಲಿ ಪಾರ್ಟಿಸಿಪೇಟ್ ಮಾಡಲು ನಾರ್ಮಲ್ ಆಗಿ ಸಿದ್ಧರಾಗಿದ್ದೇವೆಂದು ತಿಳಿಸುತ್ತಾರೆ. ನಾನು ಇಲ್ಲಿ ಅವರ ಹೆಸರನ್ನು

ಹೇಳಿದರೆ ನೋಟೀಸ್ ಕೊಡಬೇಕು, ಇತ್ಯಾದಿ ಎಲ್ಲಾ ಪ್ರಶ್ನೆಗಳು ಬರುತ್ತದೆ. ಆದರೆ, Secretary to Government, Municipalities and Urban Development Authorities ನಿಂದ ಒಂದು ಪತ್ರ ಬರುತ್ತದೆ. ಈ ಪತ್ರ ಬರುವುದಕ್ಕಿಂತಲೂ ಮುಂಚಿತವಾಗಿ ಒಂದು ಪತ್ರ ಬರುತ್ತದೆ. K.C. Kondaiah, Member of Parliament, Rajya Sabha, Karnataka, ಇವರು ಕರ್ನಾಟಕದ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣರವರಿಗೆ ಒಂದು ಪತ್ರ ಬರೆದು, ಟೆಂಡರ್ ಕರೆಯಬೇಡಿ, ಅರ್ಜೆಂಸ್ಸಿ ಇದೆ, ಇದನ್ನು ಖಾಸಗಿಯವರಿಗೆ ವಹಿಸಿಕೊಡಬೇಕೆಂದು ತಿಳಿಸುತ್ತಾರೆ. ಆಗ ಮುಖ್ಯಮಂತ್ರಿಗಳು ಎಲ್ಲಿಯೂ ಕೂಡ 'ಕೊಡಿ' ಎಂದು ಬರೆಯುವುದಿಲ್ಲ. "M.D.: Consider this in the Board Meeting to entrust the work." ಎಂದು ಪತ್ರ ಬರೆಯುತ್ತಾರೆ. ಆ ಪತ್ರದ ದಿನಾಂಕ 13.6.2000. ಮುಖ್ಯಮಂತ್ರಿಗಳಿಂದ ಬಂದ ಈ ಪತ್ರವನ್ನು ಹಾಗೇ ಇಟ್ಟುಕೊಂಡು ಮತ್ತೆ ಕಾರ್ಯದರ್ಶಿಯವರು ಮುಖ್ಯಮಂತ್ರಿಗಳಿಗೆ ಪತ್ರ ಬರೆದು, ತಾವು ಬರೆದಂಥ ಪ್ರಕಾರದಲ್ಲಿ ಇದನ್ನು ನೇರವಾಗಿ ನಾವು ಟೆಂಡರ್ ಕರೆಯುತ್ತಿದ್ದೇವೆಂದು ತಿಳಿಸುತ್ತಾರೆ. ಮತ್ತೊಂದು ಸಲ ಮುಖ್ಯಮಂತ್ರಿಗಳಿಂದ ತೆಗೆದುಕೊಂಡು ಹೋಗಿ ಸ್ವತಃ ಅವರ ಸಹಿ ಇರುವಂಥ ಒಂದು ಫೈಲ್ ನನ್ನಲ್ಲಿದೆ. ಇದರ ಮೇಲೆ instead of calling the tender ಎಂದು ಮುಖ್ಯಮಂತ್ರಿಗಳೇ ಹೇಳಿದರು. ಅವರೇ ಮತ್ತೊಂದು ಬಾರಿ ಟೆಂಡರ್ ಕರೆಯಬೇಡಿ, ಹೆಚ್ಎಸ್ಸಿಎಲ್‌ಗೆ ಎಂಟ್ರಸ್ಟ್ ಮಾಡಬೇಕೆಂದು ಸುಮಾರು 46 ಕೋಟಿ ರೂಪಾಯಿಗಳ ಕೆಲಸವನ್ನು ಎಂಟ್ರಸ್ಟ್ ಮಾಡಲಾಗಿತ್ತು. ಆದರೆ, ಹೆಚ್ಎಸ್ಸಿಎಲ್‌ನವರು ಯಾರಿಗೆ ಕೊಟ್ಟಿದ್ದಾರೆ? ಯಾರು ಕೆಲಸ ಮಾಡುತ್ತಿದ್ದಾರೆ? ಈ ಕೆಲಸ ಮಾಡುತ್ತಿರುವುದು ಹೆಚ್ಎಸ್ಸಿಎಲ್‌ನವರಲ್ಲ. ಕೇಂದ್ರ ಸರ್ಕಾರದ ಕಂಪನಿ ಇರಬಹುದು, ಅವರ ಮೇಲೂ ಎನ್‌ಕ್ವೇರಿ ಮಾಡಿ. ಕೆಲಸ ಮಾಡುತ್ತಿರುವುದು ರೆಡ್ಡಿ ವೀರಣ್ಣನವರು. ಇವರು ಇವ್ವೊತ್ತು ವರ್ಕ್ ಮಾಡುತ್ತಿದ್ದಾರೆ. ನಲವತ್ತಾರು ಕೋಟಿ ರೂಪಾಯಿಗಳ ಕಾಮಗಾರಿಯನ್ನು ಟ್ರಾನ್ಸ್‌ಫರೆನ್ಸಿ ಆಕ್ಟ್‌ನಡಿ ಟೆಂಡರ್ ಕರೆದು ಕೊಟ್ಟಿದ್ದರೆ, ಅವರೇ ಇವ್ವೊತ್ತು ಮಂಗಳೂರಿಗೆ ಶೇಕಡ 22ರಷ್ಟು ಲೆಸ್ ಟೆಂಡರ್ ಹಾಕಿದ್ದಾರೆ. ಸುಮಾರು ಇಪ್ಪತ್ತು ಕೋಟಿ ರೂಪಾಯಿಗಳ ಕೆಲಸವನ್ನು ನಲವತ್ತಾರು ಕೋಟಿ ರೂಪಾಯಿಗಳಿಗೆ ಎಂಟ್ರಸ್ಟ್ ಮಾಡುವುದಕ್ಕೋಸ್ಕರ exemption ತೆಗೆದುಕೊಂಡರೇ? ಇಷ್ಟು ಮಾತ್ರವಲ್ಲ, ಇದಕ್ಕೆ ಸಂಬಂಧಿಸಿದಂತೆ ಕ್ಯಾಬಿನೆಟ್‌ನಲ್ಲಿರುವ ನಾಲ್ಕು ಸಚಿವರ ಪತ್ರಗಳೂ ನನ್ನಲ್ಲಿವೆ. ಟ್ರಾನ್ಸ್‌ಫರೆನ್ಸಿ ಆಕ್ಟ್ ಅನ್ನು ಮಯಲೇಶನ್ ಮಾಡುವಂಥ ಪತ್ರಗಳು, ಮುಖ್ಯಮಂತ್ರಿಗಳು ಬರೆದಿರುವ ಪತ್ರಗಳನ್ನೆಲ್ಲಾ ರೆಫರೆನ್ಸ್ ಮಾಡಿ ನಾಲ್ಕು ವರ್ಕ್‌ಗಳನ್ನು ಎಂಟ್ರಸ್ಟ್ ಮಾಡಲಾಗಿದೆ. ಇನ್ನೊಂದು ಪತ್ರದ ದಿನಾಂಕ 17.10.2000. A.M. Hindasageri: "The Assistant General Manager, Hindustan Steel Works Construction Ltd., has requested for formations of reservoir at Annigeri in Dharwar District under the water supply scheme. The representation is enclosed for reference". ಇದು ಮಂತ್ರಿಗಳ ಪತ್ರ. ಪತ್ರದಲ್ಲಿ ಇದನ್ನು ನೇರವಾಗಿ ಎಂಟ್ರಸ್ಟ್ ಮಾಡಿ ಎಂದು ಬರೆದರು. ಬರೆಯುವಂಥ ಸಂದರ್ಭದಲ್ಲಿ ಏನು ಸ್ವಾರಸ್ಯ ಅಡಗಿದೆಯೆಂದರೆ, ಈಗಾಗಲೇ ಮುಖ್ಯಮಂತ್ರಿಗಳು ಒಂದು ಕೆಲಸವನ್ನು ಎಂಟ್ರಸ್ಟ್ ಮಾಡಿರುವುದರಿಂದ ಇದನ್ನೂ ಕೂಡ ಅದೇ ದಾರಿಯಲ್ಲಿ ಮಾಡಿ ಎಂದು ಪತ್ರ ಬರೆದರು. ಇದನ್ನು ಯಾರಿಗೆ ಕೊಟ್ಟರು? ಇದನ್ನು ಬೇರಾರಿಗೂ ಕೊಡಲಿಲ್ಲ.

ಹೆಚ್ಎಸ್ಸಿಎಲ್‌ನಿಂದ ಇವೊತ್ತು ಕೂಡ ನೇರವಾಗಿ ಕೆಲಸ ಮಾಡಿ ಮುಗಿಸಿರುವುದು ರೆಡ್ಡಿ ವೀರಣ್ಣನವರೇ. ಒಂದು ಭಾಗದ ಕೆಲಸವನ್ನು ಅಬ್ದುಲ್ಲಾ ಅವರು ಮಾಡಿದ್ದಾರೆ. ಇವೊತ್ತು ತಾವು ವೆರಿಫಿಕೇಶನ್ ಮಾಡಿಸುವ ಮೂಲಕ ಎಂ.ಬಿ. ಪುಸ್ತಕ ಯಾರ ಹೆಸರಿನಲ್ಲಿದೆ ಎಂಬುದನ್ನು ತಾವು ನೋಡಬಹುದು. ಇನ್ನೊಂದು ಪತ್ರ ಇದೆ. ಈ ಪತ್ರದ ಸಂಖ್ಯೆ: ಪಿಡಬ್ಲ್ಯೂಡಿ:ಎನ್:1603:2000 ದಿನಾಂಕ 5.10.2000. "Dharam Singh, Minister for Public Works: During the review meetings held on 19.9.2000, it was brought to my notice that impounding reservoir works, channel works at Raichur has been entrusted to K.S.C.C. As you may be aware, Hon'ble Chief Minister has taken a decision in the first instance of winding up the Company and on-re-conciliation, a decision has been taken to entrust only the building works to K.S.C.C. to the virtual exclusion of irrigation works, etc., I also understand that in a similar situation at Bellary, work has been entrusted to Central Public Sector Undertakings at a competitive rate. On the same line, it is necessary to entrust the Lingasugur Water Supply Impounding Reservoir at Lingusugur Taluk to Central P.S.U." ಎಂದು ಹೇಳಿ ಸುಮಾರು ಹದಿನಾರು ಕೋಟಿ ರೂಪಾಯಿಗಳ ಕೆಲಸಕ್ಕೂ ಕೂಡ ಟೆಂಡರ್ ಕರೆಯದೆ ವರ್ಕ್ ಆರ್ಡರ್ ಅನ್ನು ಎಂಟ್ರಸ್ಟ್ ಮಾಡಲಾಯಿತು. ಆ ವರ್ಕ್ ಆರ್ಡರ್ ಅನ್ನು ಯಾರಿಗೆ ಎಂಟ್ರಸ್ಟ್ ಮಾಡಲಾಯಿತು? ಆ ವರ್ಕ್ ಆರ್ಡರ್ ಅನ್ನು ಯಾರು ಮಾಡಿದ್ದಾರೆ? ಯಾರೋ ಒಬ್ಬರು ಕಂಟ್ರಾಕ್ಟರ್ ದಾರರಿಗೆ ಕೆಲಸವನ್ನು ಎಂಟ್ರಸ್ಟ್ ಮಾಡುವುದಕ್ಕೋಸ್ಕರ ಒಂದು ಸಾರ್ವಜನಿಕ ಸಂಸ್ಥೆಯ ಮೂಲಕ ಕೊಡುವುದಕ್ಕೋಸ್ಕರ ಟ್ರಾನ್ಸ್‌ಫರೆನ್ಸಿ ಆ್ಯಕ್ಟ್‌ನ್ನು ಉಪಯೋಗಿಸಿಕೊಳ್ಳುವುದಾದರೆ ದಯಮಾಡಿ ತಾವು ಇಡೀ ಟ್ರಾನ್ಸ್‌ಫರೆನ್ಸಿ ಆ್ಯಕ್ಟ್ ಅನ್ನು ಇಲ್ಲಿಟ್ಟು ಅದನ್ನು ರಿಪೀಲ್ ಮಾಡುತ್ತಿದ್ದೇವೆಂದು ನೀವು ಹೇಳಿ ನಾವು ಸಂತೋಷ ಪಡುತ್ತೇವೆ. ಏಕೆಂದರೆ, ಸರ್ಕಾರದ ಕೈಗೆ ಅಧಿಕಾರ ಕೊಡಲಾಗಿದೆ, ಜನರು ನಿಮಗೆ ಆಶೀರ್ವಾದ ಮಾಡಿ ಕಳುಹಿಸಿದ್ದಾರೆ, ನೀವು ಏನು ಬೇಕಾದರೂ ಮಾಡುವಂಥ ವ್ಯವಸ್ಥೆಗಳಿವೆ, ನೀರು ಮಾಡಿ. ಆದರೆ ಟ್ರಾನ್ಸ್‌ಫರೆನ್ಸಿ ಆ್ಯಕ್ಟ್ ವಿಚಾರದಲ್ಲಿ ಒಂದು ಕಡೆ ತಾವು ರಾಜ್ಯದಲ್ಲಿ ಟ್ರಾನ್ಸ್‌ಫರೆನ್ಸಿ ಕೊಡುತ್ತೇವೆಂದು ಹೇಳುತ್ತೀರಿ. ಇದೆಲ್ಲದರ ಹಿಂದೆ ನಡೆದಿರುವಂಥ ದೊಡ್ಡ ಕೈವಾಡಗಳು, ಇಷ್ಟೇ ಅಲ್ಲ; ನಾನು ಹೇಳುತ್ತಿದ್ದರೆ ಇನ್ನೂ ಬಹಳಷ್ಟಿದೆ. ಇದಕ್ಕೆ ಸಂಬಂಧಿಸಿದಂತೆ ಇನ್ನೂ ಹನ್ನೊಂದು ಪ್ರಕರಣಗಳು ನನ್ನಲ್ಲಿವೆ. ಈಗ ಏತಕ್ಕಾಗಿ ಇದನ್ನು ಮಾಡಲು ಹೊರಟಿದ್ದೀರಿ? ಕೆ.ಪಿ.ಟಿ.ಸಿ.ಎಲ್ ನಲ್ಲಿ ಕೆ.ಇ.ಆರ್.ಸಿ. ಬಂದ ಮೇಲೆ ಈ ಟ್ರಾನ್ಸ್‌ಫರೆನ್ಸಿ ಆ್ಯಕ್ಟ್‌ನ್ನು ಇನ್ನೊಂದು ವರ್ಷಕ್ಕೆ ಎಕ್ಸ್‌ಟೆನ್‌ಷನ್ ಏತಕ್ಕೆ ಕೊಡುತ್ತಿದ್ದೀರಿ? ಇದುವರೆಗೆ ನಾನು ಕೊಟ್ಟ ಉದಾಹರಣೆಗಳು ಹಿಂದಿನ ಕತೆಯಾಯಿತು. ಪುನಃ ಮುಂದೆ ಏತಕ್ಕೆ ಕೊಡುತ್ತಿದ್ದಾರೆ? ಮುಂದೆ ಏತಕ್ಕೆ ಮಾಡುತ್ತಿದ್ದಾರೆಂದರೆ, ಇಡೀ ರಾಜ್ಯದಲ್ಲಿ ಮಾಸ್ ಮೀಟರೈಜೇಷನ್ ಮಾಡುತ್ತಿದ್ದಾರೆ. ರಾಜ್ಯದಲ್ಲಿರುವ ಎಲ್ಲಾ ಕಡೆಗೂ ಎಲೆಕ್ಟ್ರಾನ್ ಮೀಟರ್‌ಗಳನ್ನು ಹಾಕುವಂಥ ವ್ಯವಸ್ಥೆಗಳು ಆಗುತ್ತಿದೆ. ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಕೊಂಡುಕೊಳ್ಳಬೇಕಾದರೆ ಟೆಂಡರ್ ಕರೆದು ಎಂಟ್ರೆಸ್ಟ್ ಮಾಡಬೇಕಾದ ಸಮಸ್ಯೆಗಳು ಇವೆ. ಆಗ ದೆಹಲಿಯ ಎರಡು ಸಂಸ್ಥೆಗಳಿಗೆ ವರ್ಕ್‌ನ್ನು ಎಂಟ್ರೆಸ್ಟ್ ಮಾಡಬೇಕಾದ ವ್ಯವಸ್ಥೆಗಳಿವೆ.

ಆ ಲಿಮಿಟೆಡ್ ಕಂಪನಿಗಳಿಗೆ ಎಂಟ್ರೆಸ್ಟ್ ಮಾಡಬೇಕಾದರೆ ಈಗ ಪ್ರಾವಿಜನ್ ಇಲ್ಲ. ಬೇರೆ ಬೇರೆ ಎಸ್‌ಕಾಂ ಲಿಮಿಟೆಡ್‌ಗಳಿಂದ ಸುಮಾರು 850 ಕೋಟಿ ರೂಪಾಯಿಗಳ ಆರ್ಡರ್‌ನ್ನು ಇವರು ಪ್ಲೇಸ್ ಮಾಡಬೇಕಾಗಿದೆ. ಇದಕ್ಕೋಸ್ಕರ ತಾವು ಕೇವಲ ಎರಡು ಇಲಾಖೆಗಳ ಬಗ್ಗೆ ಹೇಳಿದ್ದೀರಿ. ಬಹಳಷ್ಟು ಇಲಾಖೆಯ ವ್ಯವಸ್ಥೆಗಳು ಇದರ ಮಧ್ಯೆ ಇರುವುದರಿಂದ, ದಯಮಾಡಿ ಕೈಮುಗಿದು ಪ್ರಾರ್ಥನೆ ಮಾಡುತ್ತೇವೆ, ಇಲ್ಲಿಯವರೆಗೆ ಎರಡು ವರ್ಷಗಳ ಕಾಲ ತಮ್ಮ ಸರ್ಕಾರ ಟ್ರಾನ್ಸ್‌ಫರೆನ್ಸಿ ಆಕ್ಟ್‌ನ ಅಡಿಯಲ್ಲಿ ಶೆಲ್ಟರನ್ನು ತೆಗೆದುಕೊಂಡು ವಿನಾಯಿತಿ ತೆಗೆದುಕೊಂಡಿರುವುದು ಸಾಕು. ದಯಮಾಡಿ, ತಮ್ಮಂಥ ಅನುಭವಿ ಮಂತ್ರಿಗಳು ಇದನ್ನು ಮಂಡಿಸಿದ್ದೀರಿ. ತಮಗೆ ಮೆಜಾರಿಟಿ ಇದೆ, ತಾವು ಔಟಿಂಗ್ ಆಧಾರದ ಮೇಲೆ ತೆಗೆದುಕೊಳ್ಳಬಹುದು. ಆದರೆ, ಇದರಿಂದ ಒಂದು ವರ್ಷದಲ್ಲಿ ಆಗುವಂಥ ಎಲ್ಲಾ ಅನಾಹುತಗಳಿಗೆ ನೀವೇ ಕಾರಣವಾಗುವಂಥ ವ್ಯವಸ್ಥೆಗಳಾಗಬಾರದು ಎಂಬ ಆಸೆ ನನಗಿದೆ. ದಕ್ಷ ಮಂತ್ರಿಗಳು ತಾವಾಗಿದ್ದೀರಿ. ಆದ್ದರಿಂದ ದಯವಿಟ್ಟು ಇದನ್ನು ವಿತ್‌ಡ್ರಾ ಮಾಡಿಕೊಳ್ಳುತ್ತೀರಿ ಎಂಬ ವಿಶ್ವಾಸ ನನಗಿದೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ):- ಮಾನ್ಯ ಉಪಾಧ್ಯಕ್ಷರೆ, ಯಾವುದಾದರೂ ಕಾನೂನುಗಳಿಗೆ ತಿದ್ದುಪಡಿಯನ್ನು ತರಬೇಕಾಗಿದ್ದರೆ ಈ ಸರ್ಕಾರದಲ್ಲಿ ಅನುಭವದ ಆಧಾರದ ಮೇಲೆ ಈ ಕಾಯ್ದೆಯ ಅಡಿಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುತ್ತಿದೆಯೇ, ಅನುಕೂಲವಾಗದಿದ್ದರೆ ಇರತಕ್ಕ ನ್ಯೂನ್ಯತೆಗಳೇನು? ಅದನ್ನು ಸರಿಪಡಿಸತಕ್ಕಂಥ ಉದ್ದೇಶದಿಂದ ಈ ತಿದ್ದುಪಡಿಗಳನ್ನು ತರುತ್ತೇವೆ. ಟ್ರಾನ್ಸ್‌ಫರೆನ್ಸಿ ಆಕ್ಟ್‌ನ ಪ್ರಕಾರ ಈಗೇನು ತಿದ್ದುಪಡಿ ತಂದಿದ್ದೀರಿ ಇದರಿಂದ ಬಿಗಿ ಮಾಡತಕ್ಕದಲ್ಲ, ಸಡಿಲಗೊಳಿಸುವ ಉದ್ದೇಶವಿದೆಯೆಂದು ನಾನು ಅಂದುಕೊಂಡಿದ್ದೇನೆ. ಇರತಕ್ಕಂಥ ಕಾನೂನಿನ ಅಡಿಯಲ್ಲೇ ಅನೇಕ ರೀತಿಯ ಅನ್ಯಾಯಗಳು ಮತ್ತು ಸ್ವಜನಪಕ್ಷಪಾತ ಮತ್ತು ಬೇಕಾದವರಿಗೆ ಗುತ್ತಿಗೆ ಕೊಡತಕ್ಕದ್ದು ನಡೆಯುತ್ತಾ ಬಂದಿದೆ. ಇದರ ಬಗ್ಗೆ ಬೇಕಾದಷ್ಟು ಉದಾಹರಣೆಗಳನ್ನು ಮಾನ್ಯ ರಾಮ್‌ದಾಸ್‌ರವರು ಕೊಟ್ಟರು. ಸರ್ಕಾರವೇನೋ ಬಹಳ ಪಾರದರ್ಶಕವಾಗಿ, ಕಟ್ಟುನಿಟ್ಟಾಗಿ ಗುತ್ತಿಗೆಯನ್ನು ಕೊಡುತ್ತಿದ್ದಾರೆಂದು ಸಾರ್ವಜನಿಕವಾಗಿ ಒಂದು ಕಡೆ ಹೇಳಿಕೆಗಳನ್ನು ಕೊಡುತ್ತಿರತಕ್ಕದ್ದು, ಒಳಗಡೆ ನಡೆಯುತ್ತಿರುವುದನ್ನು ನೋಡಿದರೆ ಈ ಪಾರದರ್ಶಕ ಕಾನೂನೇನಿದೆ ಇದನ್ನೇ ರದ್ದು ಮಾಡತಕ್ಕದ್ದು ಒಳ್ಳೆಯದು. ಇದು ಒಂದು ರೀತಿಯಲ್ಲಿ ಮೋಸ ಎಂದು ಹೇಳಬೇಕಾಗುತ್ತದೆ. ಇದರ ಬಗ್ಗೆ ಮಂಡ್ಯ ಜಿಲ್ಲೆಯಲ್ಲಾದ ಬಹಳ ನಿಖರವಾದಂಥ ಅವ್ಯವಹಾರವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಮಂಡ್ಯ ಜಿಲ್ಲೆಯ ರಸ್ತೆಗಳ ಅಭಿವೃದ್ಧಿಗೋಸ್ಕರ ಮುನ್ನೂರು ಕೋಟಿ ರೂಪಾಯಿಗಳ ಹೊಸ ಪ್ಯಾಕೇಜ್‌ನ್ನು ತಂದಿದ್ದಾರೆ. ಅದಕ್ಕೆ ನಾವು ಅಭಿನಂದನೆಯನ್ನು ಸಲ್ಲಿಸಿದ್ದೇವೆ. ಅದರಿಂದ ನನ್ನ ಕ್ಷೇತ್ರದಲ್ಲೂ ಅನುಕೂಲವಾಗುತ್ತದೆ. ಇಲ್ಲಾ ಎಂದು ಹೇಳುವುದಿಲ್ಲ. ಆದರೆ ತಾವು ತಂದಿರತಕ್ಕ ಯೋಜನೆ ಕೆಲವೇ ಗುತ್ತಿಗೆದಾರರನ್ನು ಅನುಕೂಲ ಮಾಡುವುದಕ್ಕೋ ಅಥವಾ ಸಾರ್ವಜನಿಕವಾಗಿ ಒಳ್ಳೆಯ ಪಾರದರ್ಶಕವಾಗಿ ಕೆಲಸ ಮಾಡುವುದಕ್ಕೋ ಎಂಬ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಮೊದಲನೆ ವರ್ಷಕ್ಕೆ 100 ಕೋಟಿ ರೂ. ಎರಡನೆ ವರ್ಷಕ್ಕೆ 100 ಕೋಟಿ ಮೂರನೇ ವರ್ಷಕ್ಕೆ 100 ಕೋಟಿ ರೂ. ಹೀಗೆ ಒಟ್ಟು ಮೂರು ವರ್ಷಗಳಲ್ಲಿ 300 ಕೋಟಿ ರೂ.ಗಳನ್ನು ಖರ್ಚು ಮಾಡತಕ್ಕ ಒಂದು ಯೋಜನೆ. ಮೊದಲನೆ ವರ್ಷ 100 ಕೋಟಿ ರೂಪಾಯಿಗಳ ಕೆಲಸಕ್ಕೆ 13.12.2002ರಲ್ಲಿ ಸುಮಾರು 102 ಅರ್ಜಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಐವತ್ತು ಅರ್ಜಿಗಳನ್ನು

ಮಾತ್ರ ಟೆಂಡರ್ ಬಾಕ್ಸ್‌ಗೆ ಹಾಕಿದ್ದಾರೆ. ಇನ್ನು 52 ಜನ ಗುತ್ತಿಗೆದಾರರ ಅರ್ಜಿ ತೆಗೆದುಕೊಂಡಿದ್ದಾರೆ, ಆದರೆ ಬಾಕ್ಸ್‌ಗೆ ಹಾಕಿಲ್ಲ. ತಕ್ಷಣ ಸರ್ಕಾರ ನೀವು ಅರ್ಜಿ ತೆಗೆದುಕೊಂಡ ಮೇಲೆ ಟೆಂಡರ್‌ನ್ನು ಏಕೆ ನಮೂದು ಮಾಡಲಿಲ್ಲವೆಂದು ನೋಟೀಸ್ ಕೊಡಬೇಕಾಗಿತ್ತು. ಆದರೆ ಆ ಕೆಲಸ ಮಾಡಿಲ್ಲ. ಅನಂತರ ಕೇವಲ 25 ಪ್ಯಾಕೇಜ್‌ಗಳಿಗೆ 56 ಕೆಲಸಗಳಿಗೆ 50 ಅರ್ಜಿಗಳು ಮಾತ್ರ ಬಂದಿವೆ. ಇದನ್ನು ಏನು ಮಾಡಬೇಕೆಂದು ಅಲ್ಲಿಯ ಸೂಪರಿಂಟೆಂಡೆಂಟ್ ಇಂಜಿನಿಯರ್ ಇಲ್ಲವೇ ಎಗ್ಸಿಕ್ಯೂಟೀವ್ ಇಂಜಿನಿಯರ್ ಅವರು ಅರ್ಜಿಯನ್ನು ಸಂಪೂರ್ಣವಾಗಿ ಬಾಕ್ಸ್‌ಗೆ ಹಾಕಿಲ್ಲ. ನಾವೇನು ಮಾಡಬೇಕೆಂದು ಸರ್ಕಾರಕ್ಕೆ ಬರೆಯಬೇಕಾಗಿತ್ತು. ಆದರೆ ಅದನ್ನು ಮಾಡಿಲ್ಲ. ಆದರೆ ತರಾತುರಿಯಲ್ಲಿ 100 ಕೋಟಿ ರೂ.ನಲ್ಲಿ 20 ಕೋಟಿರೂ.ಗಳ ಕೆಲಸವನ್ನು ಯಾರೋ ಹೊರಗಡೆಯವರಿಗೆ ಕೊಟ್ಟು ಉಳಿದ 80 ಕೋಟಿ ರೂ.ಗಳ ಕೆಲಸವನ್ನು ಅಲ್ಲಿಯವರೇ ಹಂಚಿಕೊಂಡಿದ್ದಾರೆ. ಸಾರ್ವಜನಿಕರು ಇದರಲ್ಲಿ ಅವ್ಯವಹಾರವಾಗಿದೆ, ಸರ್ಕಾರಕ್ಕೆ 30 ಕೋಟಿ ರೂಪಾಯಿಗಳ ನಷ್ಟವಾಗುತ್ತದೆಂದು ಸರ್ಕಾರಕ್ಕೆ ಮತ್ತು ಸಚಿವರಿಗೆ ಮನವಿ ಕೊಟ್ಟಿದ್ದಾರೆ ಮತ್ತು ಇದನ್ನು ತಡೆಯಬೇಕೆಂದು ಬರೆದಿದ್ದಾರೆ. ಆದರೆ ಅದನ್ನು ಗಣನೆಗೆ ತೆಗೆದುಕೊಳ್ಳದೆ 80 ಕೋಟಿ ರೂಪಾಯಿಗಳನ್ನು 100 ಕೋಟಿ ರೂ.ಗೆ ಅವಾರ್ಡ್ ಮಾಡಿದ್ದಾರೆ. ಹಿಂದೆ ಅದಕ್ಕೆ ಸುಮಾರು 15 ರಿಂದ 20 ಪರ್‌ಸೆಂಟ್ ಜಾಸ್ತಿ ನಮೂದು ಮಾಡಿದ್ದಾರೆ. ಅದೇ ಗುಣಮಟ್ಟದ ಕೆಲಸಕ್ಕೆ ನಬಾರ್ಡ್ ಮತ್ತು ಸಿಆರ್‌ಎಫ್ ನಲ್ಲಿ ಸುಮಾರು 15 ರಿಂದ 20 ಪರ್‌ಸೆಂಟ್ ಕಡಿಮೆ ನಮೂದು ಮಾಡಿದ್ದಾರೆ. ಆದರೆ ಇಲ್ಲಿ 15 ರಿಂದ 20 ಪರ್‌ಸೆಂಟ್ ಜಾಸ್ತಿ ಹಾಕಿದ್ದಾರೆ. ಅಂದರೆ 100 ಕೋಟಿ ರೂ.ಗೆ ಸುಮಾರು 30 ಕೋಟಿ ರೂ. ಸರ್ಕಾರಕ್ಕೆ ನಷ್ಟವಾಗಿದೆ. ಯಾರು ಮಾಡಿದ್ದಾರೆಂದು ಕೇಳಿದರೆ ಅಲ್ಲಿನ ಸ್ಥಳೀಯ ಗುತ್ತಿಗೆದಾರರ ಮೂಲಕ ಮಾಡಿಸಲು ಹೊರಟಿದ್ದಾರೆ. ಅದು ನಾಲ್ಕನೆಯ ಕೈ ಗುತ್ತಿಗೆ ಅವಾರ್ಡ್ ಆಗಿರತಕ್ಕದ್ದು ಬೆಂಗಳೂರಿನಲ್ಲಿರುವ ಯಾರಿಗೋ ಒಬ್ಬರಿಗೆ ಅದನ್ನು ಇನ್ನೊಬ್ಬ ಯಾರಿಗೋ ಕೊಟ್ಟಿದ್ದಾನೆ, ಅವನು ಇನ್ನೊಬ್ಬನಿಗೆ ಸಬ್ ಕಾಂಟ್ರಾಕ್ಟ್ ಕೊಟ್ಟು ಒಟ್ಟು ನಾಲ್ಕನೆಯ ಕೈ ಇದರಲ್ಲಿದೆ. ಈ ರೀತಿ ಕೊಟ್ಟು ಒಟ್ಟು 30 ಕೋಟಿ ರೂ. ಸರ್ಕಾರಕ್ಕೆ ನಷ್ಟವಾಗಿದೆ ಈ ತಿದ್ದುಪಡಿಗಳನ್ನು ತರತಕ್ಕ ಉದ್ದೇಶವೇನೆಂದರೆ, ಈ ಎಲ್ಲಾ ನ್ಯೂನ್ಯತೆಗಳನ್ನು ಬಿಗಿ ಮಾಡತಕ್ಕ ರೀತಿಯಲ್ಲಿ ತಿದ್ದುಪಡಿಗಳನ್ನು ತರಬೇಕೆ ಹೊರತು ಇನ್ನೂ ಸಡಿಲ ಮಾಡುವ ರೀತಿಯಲ್ಲಿ ತರುವುದಲ್ಲ. ತಾವು ತಿದ್ದುಪಡಿಯನ್ನು ತನ್ನಿ. ಯಾರ್ಯಾರು ಅರ್ಜಿಗಳನ್ನು ತೆಗೆದುಕೊಳ್ಳುತ್ತಾರೆ ಅವರೆಲ್ಲರೂ ಕಡ್ಡಾಯವಾಗಿ ಟೆಂಡರ್ ನಮೂದು ಮಾಡಿ ಬಾಕ್ಸ್‌ಗೆ ಹಾಕಬೇಕು. ಅವರೇನಾದರೂ ಅರ್ಜಿ ತೆಗೆದುಕೊಂಡೂ ಟೆಂಡರ್ ನಮೂದು ಮಾಡದಿದ್ದರೆ ಅವರನ್ನು ಗುತ್ತಿಗೆಯಿಂದ ರದ್ದು ಮಾಡುತ್ತೇವೆ ಎನ್ನತಕ್ಕ ಕಾನೂನನ್ನು ತರಬೇಕಾಗುತ್ತದೆ. ಅವರೆಲ್ಲಾ ಸಾಧಾರಣ ಗುತ್ತಿಗೆದಾರರಲ್ಲ, ಕ್ಲಾಸ್ ಒನ್ ಗುತ್ತಿಗೆದಾರರು. ಅವರೇನು ಬ್ಲಾಕ್‌ಮೇಲ್‌ಗೋಸ್ಕರ ಅಲ್ಲ, ಬೆರೆಯವರ ಜೊತೆ ಹೊಂದಾಣಿಕೆ ಮಾಡಿ ಕೊಳ್ಳುವುದಕ್ಕಲ್ಲ, ಅವರೇನಾದರೂ ಆ ರೀತಿ ಮಾಡಿದರೆ ಅವರ ಗುತ್ತಿಗೆಯನ್ನು ರದ್ದು ಮಾಡುತ್ತೇವೆಂದು ಕಾನೂನಿಗೆ ತಿದ್ದುಪಡಿ ತರಬೇಕಾಗುತ್ತದೆ. ಏನಾದರೂ ನ್ಯೂನತೆಗಳು ಇದ್ದರೆ ಸರ್ಕಾರಕ್ಕೆ ಬಂದು ಅದನ್ನು ಯಾರು ಅವಾರ್ಡ್ ಮಾಡುತ್ತಾರೆ, ಪಿ.ಡಬ್ಲ್ಯೂ.ಡಿ. ಕಾರ್ಯದರ್ಶಿ ಇರಬಹುದು, ಮುಖ್ಯ ಅಭಿಯಂತರರು ಇರಬಹುದು, ಅದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕದ್ದು ಆಗಬೇಕಾಗಿದೆ. ಅದನ್ನು ಬಿಟ್ಟು ಎರಡು ವರ್ಷದ್ದನ್ನು ಮೂರು ವರ್ಷಕ್ಕೆ ಕೊಡತಕ್ಕದ್ದು ಮತ್ತು ಇನ್ನೂ ಏನೇನನ್ನೋ ಸಡಿಲ ಮಾಡತಕ್ಕ ರೀತಿಯಲ್ಲಿ ತಿದ್ದುಪಡಿ ತರತಕ್ಕದನ್ನು ಮಾಡಿದರೆ ಆಗುವುದಿಲ್ಲ.

ನಾನೇನು ಮಂಡ್ಯದ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ, ತಕ್ಷಣವೇ ಆ ಗುತ್ತಿಗೆಯನ್ನು ರದ್ದು ಮಾಡಿಸಬೇಕು ಮತ್ತು ಯಾರು ಈ ರೀತಿ ತರಾತುರಿಯಲ್ಲಿ ಗುತ್ತಿಗೆಗೆ ಅವಾರ್ಡ್ ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ.

+ಶ್ರೀ ಸಿ.ಚಿನ್ನಿಗಪ್ಪ(ಕೊರಟಗೆರೆ):- ಮಾನ್ಯ ಉಪಾಧ್ಯಕ್ಷರೆ, ಈ ತಿದ್ದುಪಡಿ ಬಗ್ಗೆ ಅನೇಕ ಹಿರಿಯ ಸದಸ್ಯರು ಇದು ವಿಚಿತ್ರವಾದದ್ದು ಎಂದು ವರ್ಣನೆ ಮಾಡಿದ್ದಾರೆ. ಸರ್ಕಾರ ಆಡಳಿತ ನಡೆಸಬೇಕಾದರೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದು ಕರ್ತವ್ಯ. ಈ ಮಧ್ಯೆ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿ ನಾವು ಆಡಳಿತದಲ್ಲಿ ಸ್ಪಷ್ಟತೆಯನ್ನು ಮತ್ತು ಪಾರದರ್ಶಕತೆಯನ್ನು ಅಳವಡಿಸಿಕೊಳ್ಳುತ್ತೇವೆಂದು ಜನತೆಯ ಮುಂದೆ ಸ್ಪಷ್ಟಪಡಿಸಿ ಅದನ್ನು ಕಾರ್ಯಗತ ಮಾಡಬೇಕಾದರೆ ಯಾವುದನ್ನೂ ಅಳವಡಿಸಿಕೊಂಡಿರುವುದಿಲ್ಲ. ಉದಾಹರಣೆಗೆ, ನುಸಿ ರೋಗದ ಬಗ್ಗೆ ಔಷಧಿಯನ್ನು ಸಿಂಪಡಿಸಿ ಎಂದು ಹೇಳಿ ಟೆಂಡರ್ ಕರೆದರು, ಕೊನೆಗೆ ಏನೇನೋ ಮಾಡಿ ಔಷಧಿಯನ್ನು ಕೊಡುವಂತೆ ಮಾಡಿದರು. ನಾವೆಲ್ಲರೂ ಇವತ್ತು ಔಷದಿಯನ್ನು ಬಳಸಿ ಸುಮಾರು ಸಾವಿರ ತೆಂಗಿನ ಮರಕ್ಕೆ ಔಷಧಿಯನ್ನು ಬಳಸಿದರೆ ಅದರಲ್ಲಿ 800 ಮರಗಳು ಇವತ್ತು ಒಣಗಿಹೋಗಿವೆ. ಔಷಧಿಯನ್ನು ಕೊಂಡವರು ಯಾರು? ಸರ್ಕಾರದ ಪಾರದರ್ಶಕತೆ ಎಲ್ಲಿದೆ? ಸರ್ಕಾರ ನಿಜವಾಗಿಯೂ ಜನತೆಗೆ ಯಾವ ರೀತಿಯಲ್ಲಿ ಅನುಕೂಲವನ್ನು ಮಾಡಿದ್ದಾರೆ ಎಂಬುದನ್ನು ರಾಜ್ಯದ ಜನರು ಅರ್ಥ ಮಾಡಿಕೊಂಡಿದ್ದಾರೆ. ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು. ಅದೇ ರೀತಿ ಕೊಟ್ಯಾಂತರ ರೂಪಾಯಿಗಳ ಕಾಮಗಾರಿಯನ್ನು ಕಾಂಟ್ರಾಕ್ಟ್ ಕೊಡತಕ್ಕ ವಿಚಾರದಲ್ಲಿ ಒಂದು, ಎರಡು, ಮೂರು ಎಂದು ಮಾಡಿದರು. ಮೊದಲನೆಯ ವರ್ಷ ಟೆಂಡರ್‌ಗೆ ಎಂದು ಕೊಟ್ಟರು. ಜಿಲ್ಲಾ ಪಂಚಾಯಿತಿಯಲ್ಲಿಯೂ ಕಾಮಗಾರಿ ಐದು ಲಕ್ಷಕ್ಕಿಂತ ಮೇಲಿದ್ದರೆ ಟೆಂಡರ್ ಕರೆಯಬೇಕು. ಅದಕ್ಕಿಂತ ಕಡಿಮೆ ಇದ್ದರೆ ಟೆಂಡರ್ ಮಾಡುವಂತಿಲ್ಲವೆಂದು ಮಾಡಿದರು. ಮೊದಲು ಹಾಗೇ ಕರೆದರು. ಅನಂತರ ಒಂದೇ ವರ್ಷದಲ್ಲಿ ಅದನ್ನು ಬದಲಾವಣೆ ಮಾಡಿದರು. ಲಕ್ಷಕ್ಕೂ, ಐದು ಲಕ್ಷಕ್ಕೂ ಟೆಂಡರ್ ಇಲ್ಲ ಎಂದು ನಿಗದಿ ಮಾಡಿದರು. ಆಗ ಕೆಲಸ ಮಾಡಬೇಕಾದಾಗ ಯೋರೋ ಗುತ್ತಿಗೆದಾರರು ಅನ್ಯಾಯ ಮಾಡಲು ಕಾಯುತ್ತಿರುತ್ತಾರೆ. ಸಾರ್ವಜನಿಕರ ಹಣವನ್ನು ಕಬಳಿಸಲು ಕಾಯುತ್ತಿರುತ್ತಾರೆ. ಅವರನ್ನು ನೀವು ಶಾಮೀಲು ಮಾಡಿದರೆ ಹೇಗೆ? ಹೀಗಾದರೆ ನಮಗೆ ಆಡಳಿತವನ್ನು ಕೊಡತಕ್ಕಂಥ ಶಕ್ತಿ ಇದೆಯೇನು? ನಿಜವಾದಂಥ ನ್ಯಾಯವೇನು ಎಂಬುದನ್ನು ದಯಮಾಡಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಇವತ್ತೇನು ವಿಧೇಯಕವನ್ನು ಮಂಡಿಸಿದ್ದಾರೆ ಇದರಲ್ಲಿರುವ ನಿಜವಾದಂಥ ಗುಣಾತ್ಮಕವಾದ ವಿಚಾರಗಳನ್ನು ಅರ್ಥ ಮಾಡಿಕೊಂಡು ಸಾರ್ವಜನಿಕರ ಹಿತದೃಷ್ಟಿಯಿಂದ ಉತ್ತಮವಾಗಿ ಬಳಕೆಯಾಗುವಂಥ ರೀತಿಯಲ್ಲಿ ಆಜ್ಞೆ ಮಾಡಬೇಕು. ಈಗ ತಂದಿರುವಂಥದ್ದು ಉತ್ತಮವಾದ ವಿಧೇಯಕವಲ್ಲ. ಇದನ್ನು ನಾನೂ ಸಹ ವಿರೋಧ ಮಾಡುತ್ತೇನೆ. ಸರ್ಕಾರ ಇದರ ಬಗ್ಗೆ ಮತ್ತೆ ಚಿಂತನೆ ಮಾಡಿ ಅದರ ಅನುಕೂಲತೆಯನ್ನು ಅರ್ಥ ಮಾಡಿಕೊಂಡು ಮೊದಲು ಇದ್ದ ರೀತಿಯಲ್ಲೇ ಮಾಡಬೇಕೆಂದು ಹೇಳಿ ಆ ಪ್ರಕಾರವೇ ಈ ವಿದೇಯಕವನ್ನು ಮಂಡಿಸಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

+ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೆ, ಈ ತಿದ್ದುಪಡಿಯನ್ನೇನು ತಂದಿದ್ದೀರಿ ಇದರ ಹಿಂದಿನ ಉದ್ದೇಶವೇನು ಎಂಬುದು ತಮ್ಮ ಗಮನಕ್ಕೆ

ಈಗಾಗಲೇ ಬಂದಿದೆ. ಶ್ರೀ ರಾಮದಾಸ್‌ರವರು ಒಂದೆರಡು ಪ್ರಕರಣಗಳ ಬಗ್ಗೆ ಮಾತ್ರ ಹೇಳಿದ್ದಾರೆ. ಆದರೆ ಇಂಥದ್ದು ಬಹಳಷ್ಟು ಇದೆ. ಪಾರದರ್ಶಕತೆ ಕಾನೂನನ್ನೇನು ತಾವು ತಂದಿದ್ದೀರಿ ಅದಕ್ಕೆ ವ್ಯತಿರಿಕ್ತವಾಗಿಯೇ ಸರ್ಕಾರ ನಡೆಯುತ್ತಿದೆ. ಸ್ಪೆಶಲ್ ಪ್ಯಾಕೇಜ್ ಎನ್ನುವಂಥದ್ದು, ಖಾಸಗಿ ಗುತ್ತಿಗೆದಾರರಿಗೆ ಸರ್ಕಾರಿ ಸಂಸ್ಥೆಗಳ ಹೆಸರಿನ ಮೂಲಕ ಕೊಡುವಂಥದ್ದು ಇವೆಲ್ಲಾ ನಡೆದುಕೊಂಡು ಬಂದಿದೆ. ಹುಬ್ಬಳ್ಳಿ-ಧಾರವಾಡದಲ್ಲಿ ನೀರಸಾಗರ ಕೆರೆಯ ಹೂಳನ್ನೇನು ತೆಗೆಯುವ ಕೆಲಸ ಮಾಡಿಸಿದರೋ ಅದನ್ನೂ ಇದೇ ನೆಪದಲ್ಲಿ ಮಾಡಿದ್ದಾರೆ. ಅದಕ್ಕೆ ಟೆಂಡರ್ ಇಲ್ಲ.'ಏನೂ ಇಲ್ಲ. ಅದರ ಬಗ್ಗೆ ಚರ್ಚೆಗೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೇನೆ. ಅದೂ ಸಹ ಇದೇ ರೀತಿ, ನಾಲ್ಕು ಕೋಟಿ ರೂ.ಗಳ ವೆಚ್ಚದ್ದು. ಅದಕ್ಕೆ ಯಾವುದೂ ಟೆಂಡರ್ ಅಲ್ಲ, ಅದಕ್ಕೆ ಬರಗಾಲವೆಂದು ಹೇಳಿದಿರಿ, ಬರಗಾಲವಿರುವುದರಿಂದ ಜರೂರಾಗಿ ಮಾಡಬೇಕಾಗಿದೆ. ಆದ್ದರಿಂದ ಸಂಸ್ಥೆಯೊಂದಕ್ಕೆ ಕೊಟ್ಟೆವು ಎಂದು ಹೇಳಿದ್ದೀರಿ. ಅಲ್ಲಿ ಕೆಲಸ ಮಾಡಿದವರು ಖಾಸಗಿ ವ್ಯಕ್ತಿಗಳೇ.

4.10 ಪಿಎಂ

ಈ ಪಾರದರ್ಶಕ ಕಾನೂನು ಕೇವಲ ಪ್ರಚಾರ ಮಾಡಿಕೊಳ್ಳಲಿಕ್ಕೆ ಮಾತ್ರ ತಂದಿದ್ದೀರಿ. ಈಗ ಎರಡು ವರ್ಷ ಇದ್ದುದ್ದನ್ನು.....

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಿಸರ್ಗ ವಿಕೋಪ ನಿಧಿಯಲ್ಲಿ ಕೆಲಸ ಮಾಡುವುದಕ್ಕೆ ಸೆಕ್ಷನ್ 4(a) ರಲ್ಲಿ exemption ಇದೆಯಲ್ಲವೇ?

ಶ್ರೀ ಜಗದೀಶ್ ಶೆಟ್ಟರ್:- ಅಣ್ಣಿಗೇರಿ ಕುಡಿಯುವ ನೀರಿನ ಯೋಜನೆ ತುರ್ತಾಗಿ ಮಾಡುವಂಥಾದ್ದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಕುಡಿಯುವ ನೀರಿನ ಯೋಜನೆ ಮಾಡಬಾರದಾಗಿತ್ತು ಎಂದಿದ್ದರೆ ಅದನ್ನು ಮಾಡುವಂತಿರಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಸುಮ್ಮನೆ ಈ ಆಕ್ಟ್ ತೆಗೆದುಕೊಂಡು ಬಂದಿದ್ದೀರಿ ಅಷ್ಟೇ. ಈಗ ತಿದ್ದುಪಡಿ ಮಾಡಿ ಏನು ಮಾಡುತ್ತಿದ್ದೀರಿ? ಎರಡು ವರ್ಷದ ಅವಧಿ ಈಗ ಮುಗಿಯುತ್ತಿದೆ. ಮುಂದೆ ಇನ್ನೊಂದು ವರ್ಷ extend ಮಾಡುತ್ತಿದ್ದೀರಿ. ಈ ಅವ್ಯವಹಾರಗಳಿಗೆ ಮತ್ತೊಂದು extension ಅಷ್ಟೇ. ಎರಡು ವರ್ಷಕ್ಕೆ ಇದ್ದದ್ದನ್ನು ಮೂರು ವರ್ಷಕ್ಕೆ extend ಮಾಡುತ್ತಿದ್ದೀರಿ, ಮುಂದಿನ ವರ್ಷ ಎಲೆಕ್ಷನ್ ಬರುತ್ತಿದೆ. ಅದರ ಸಲುವಾಗಿಯೇ ಈ ಕಾನೂನನ್ನು ತಂದಿದ್ದೀರಿ. ಇದರಲ್ಲಿ ಯಾವುದೇ ಒಂದು ಸದುದ್ದೇಶ ಇಲ್ಲ. ಸರ್ಕಾರ ಮತ್ತೆ ಇನ್ನೊಂದು ವರ್ಷ ಈ ಅವ್ಯವಹಾರಗಳನ್ನು ಮಾಡಿಸಿಕೊಳ್ಳಲಿಕ್ಕೆ extension ಕೇಳುತ್ತಿದೆ. ಈ ಅಮೆಂಡ್‌ಮೆಂಟ್ ಬಿಲ್ ಸದುದ್ದೇಶದಿಂದ ಕೂಡಿರುವಂಥಾದ್ದಲ್ಲ. ಆದ್ದರಿಂದ ಇದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕೆನ್ನುವ ಒತ್ತಾಯವನ್ನು ನಾವು ಮಾಡುತ್ತೇವೆ ಮತ್ತು ಇದನ್ನು ನಾವು ಪ್ರೊಟೆಸ್ಟ್ ಸಹಾ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಉಪಾಧ್ಯಕ್ಷರೇ, ನಾನು ತಿಳಿದುಕೊಂಡಿದ್ದೆ. ಇದೊಂದು ಸಣ್ಣ ತಿದ್ದುಪಡಿ ಆಗಿರುರುದರಿಂದ, ಇಷ್ಟೊಂದು ವಿಪುಲವಾದಂತಹ ಚರ್ಚೆ ನಡೆಯುತ್ತದೆ ಎಂದು ನಾನು ನಿರೀಕ್ಷಣೆ ಮಾಡಿರಲಿಲ್ಲ. ಮಸೂದೆ ಸಣ್ಣದಾದರೂ ಚರ್ಚೆಯ ಗದಾಪ್ರಹಾರ ದೊಡ್ಡ ಪ್ರಮಾಣದಲ್ಲೇ ಇದೆ. ಚಿಂತೆ ಇಲ್ಲ. ಈ ಕಾನೂನು ತರುವ ಹಿಂದೆ ನಮ್ಮ ಸರ್ಕಾರದ ಚಿಂತನೆಯೇ ಇದಕ್ಕೆ ಮುಖ್ಯವಾದಂತಹ ಕಾರಣ. ಈ ಕಾನೂನನ್ನು ತರುವಾಗ ನಮ್ಮ ದೃಷ್ಟಿಯನ್ನು ಮತ್ತು ಧೋರಣೆಗಳನ್ನು ಅದರಲ್ಲೇ ಸ್ಪಷ್ಟ ಮಾಡಿಸಿಕೊಂಡಿದ್ದೇವೆ. ಯಾವಾಗಲೂ ಒಂದು

ಕಾನೂನನ್ನು ತಂದಾಗ ಪ್ರಾರಂಭದ ದಿಸೆಯಲ್ಲಿ ಕೆಲವು ಅನಿವಾರ್ಯವಾದಂತಹ ಪ್ರಸಂಗ ಉದ್ಭವವಾಗಬಹುದು ಎನ್ನತಕ್ಕಂಥ ಧೋರಣೆಯನ್ನು ಗಮನದಲ್ಲಿಟ್ಟುಕೊಂಡೇ ಪ್ರಾರಂಭದ ಕಾನೂನು ಬಂದ ತಾರೀಖಿನಿಂದ ಎರಡು ವರ್ಷದವರೆಗೆ ಸರ್ಕಾರಿ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಗುತ್ತಿಗೆ ನೀಡುವುದಾಗಲೀ ಅಥವಾ ಅವರಿಂದ ಖರೀದಿ ಮಾಡತಕ್ಕಂಥ ವಿಚಾರದಲ್ಲಿ ನಾವು ವಿನಾಯಿತಿಯನ್ನು ಎರಡು ವರ್ಷದವರೆಗೆ ನೀಡಿದ್ದೆವು. ಅಂದರೆ ಈ ಸದನ ತನಗೆ ಇದ್ದಂತಹ ಪ್ರಜ್ಞಾಪೂರ್ವಕವಾದಂತಹ ಆಲೋಚನೆ ಮತ್ತು ವಿಚಾರಶೀಲತೆಯಿಂದಾಗಿ ಈ ಪ್ರಾರಂಭದ ಎರಡು ವರ್ಷಕ್ಕೆ ಸರ್ಕಾರ ಸ್ವಾಮ್ಯದ ಸಂಸ್ಥೆಗಳಿಗೆ ಕೊಡುವಂತಹ ಕೆಲಸಕ್ಕೆ ವಿನಾಯಿತಿ ನೀಡಿದೆ ಅಂದರೆ ಈ ಸದನಕ್ಕೆ ಆ ಒಂದು ಪರಿಕಲ್ಪನೆ ಇತ್ತು ಎನ್ನತಕ್ಕಂಥದ್ದನ್ನು ನಾವು ಯಾವಾಗಲೂ ಗಮನಿಸಿಕೊಳ್ಳಬೇಕು. ಈ ಕಾನೂನು 2000ನೇ ಇಸವಿ ಅಕ್ಟೋಬರ್ 4ನೇ ತಾರೀಖಿಗೆ ಜಾರಿಗೆ ಬಂದಿದೆ. ಈಗ ಮೊನ್ನೆ ಅಕ್ಟೋಬರ್ ತಿಂಗಳಿಗೆ ಅದು ಜಾರಿಗೆ ಬಂದು ಎರಡು ವರ್ಷ ಮುಕ್ತಾಯವಾಗಿದೆ. ಆ ತಾರೀಖಿನಿಂದ ಮತ್ತೆ ನಾವು ಒಂದು ವರ್ಷ extention ಕೇಳಿದ್ದೇವೆ ಎಂಬುದು ನಿಜ.....

ಶ್ರೀ ಪಿ.ಜಿ.ಆರ್. ಸಿಂಧ್ಯಾ:–ಇದೆಲ್ಲಾ explanation ಬೇಕಾಗಿಲ್ಲ ಮತ್ತು ಈ ಬಿಲ್ಲೂ ಕೂಡ ಬೇಕಾಗಿಲ್ಲ ಎಂದು ನಾನು ಹೇಳುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ನನ್ನ ಪ್ರಶ್ನೆಯೊಂದಕ್ಕೆ, ಸುಮಾರು 250 ಕೋಟಿ ರೂಪಾಯಿಗಳಷ್ಟು ಪರ್ಚೇಸ್ ಮಾಡಲಿಕ್ಕೆ transparency ಆಕ್ಟ್‌ನಿಂದ exemption ಕೊಟ್ಟಿರತಕ್ಕ ಉತ್ತರವನ್ನು ಈ ಸದನದಲ್ಲಿ ನನಗೆ ನೀಡಿದ್ದಾರೆ. ಆ ಉತ್ತರವನ್ನು ನಾನು ಇಂದು ಸದನಕ್ಕೆ ತರಲಿಲ್ಲ. ಸರ್ಕಾರಿ ಆದೇಶ ಹೊರಡಿಸಿ ಇದನ್ನು ಕೊಡಬೇಕಾಗಿತ್ತು. ಹಿಂದೆ ಮುಂದೆ ಎಲ್ಲಾ ನೀವು exemption ಮಾಡಿಕೊಂಡಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಹಿಂದೆ ಮುಂದೆ exemption ಅಂದರೆ ಏನು ಎಂಬುದು ಗೊತ್ತಾಗಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:– ಮಾನ್ಯ ಉಪಾಧ್ಯಕ್ಷರೇ, ಮೂಲ ಧೋರಣೆಗೇ ವ್ಯತಿರಿಕ್ತವಾದ ತೀರ್ಮಾನವನ್ನೇನೂ ನಾವು ಮಾಡಿಲ್ಲ. ಕಾನೂನಿನಲ್ಲಿ ಅವಕಾಶ ಇದ್ದದ್ದನ್ನು ಸ್ವಲ್ಪ ದಿವಸ ವಿಸ್ತರಿಸುತ್ತಿದ್ದೇವೆ. ಈಗ ಮಸೂದೆ ಪಾಸ್ ಮಾಡುವುದರಿಂದ ಇನ್ನೊಂದು ಆರು ತಿಂಗಳು ಅದು ಮುಂದಕ್ಕೆ ಹೋಗುತ್ತದೆಯೇ ವಿನಃ ಅದರಲ್ಲಿ ಏನೂ ಬದಲಾವಣೆ ಇಲ್ಲ. ಒಂದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಇದು ಸರ್ಕಾರದ ಸ್ವಾಮ್ಯದ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಒಟ್ಟಾರೆ ರಾಜ್ಯ ಸರ್ಕಾರದ ವ್ಯವಹಾರದಲ್ಲಿ ಎಷ್ಟು ಪ್ರಮಾಣದ ಹಣವನ್ನು ನಾವು ಇವತ್ತು ಖಾಸಗಿಯವರಿಗೆ ಕೊಟ್ಟು ಕೆಲಸ ಮಾಡಿಸುತ್ತಿಲ್ಲ? ಅಲ್ಲೇನಾದರೂ ವಿನಾಯಿತಿ ಕೊಟ್ಟಿದ್ದೇವೆಯೇ? ಇಲ್ಲವಲ್ಲಾ ಈ ಸರ್ಕಾರದ ಸ್ವಾಮ್ಯದ ಸಂಸ್ಥೆಗಳಿಗೆ ನಾವು ಕೆಲಸ ನೀಡುವುದಾಗಲೀ ಅಥವಾ ಅವರಿಂದ ಸಂಗ್ರಹಣೆ ಮಾಡತಕ್ಕಂಥದ್ದು ಆಗಲೀ, ಒಟ್ಟಾರೆ ವ್ಯವಹಾರದ ಪ್ರಮಾಣದ ಶೇಕಡ 5-10 ಮಾತ್ರ ಆಗಬಹುದೇನೋ. ಅದಕ್ಕಿಂತ ಏನೂ ಹೆಚ್ಚಾಗಲಿಕ್ಕೆ ಸಾಧ್ಯವಿಲ್ಲ. ಉಳಿದಂತಹ ಎಲ್ಲಾ ಕಲಂಗಳು ಮತ್ತು ಷರತ್ತುಗಳು ಈ ಕಾನೂನು ಪ್ರಕಾರ ಇವತ್ತು ನಿರ್ವಹಣೆಯಾಗುತ್ತಿದೆ. ಆದರೆ ನಮ್ಮ ಹಿರಿಯ ಮಾನ್ಯ ಸದಸ್ಯರಾದ ಭೈರೇಗೌಡರು, ಏನಪ್ಪಾ, ಈ consultancy ಎಲ್ಲಾ ಬಂದು ಬಿಟ್ಟಿದೆ ಎಂದು ಹೇಳಿದರು. ಮಾನ್ಯ ಭೈರೇಗೌಡರೂ ಕೂಡ ಸರ್ಕಾರ ನಡೆಸಿದ್ದಾರೆ. ಆ ಕಾಲದಲ್ಲಿ ಹೆಲ್ತ್ ಸಿಸ್ಟಮ್ ಎಂದು ಜಾರಿಗೆ ಬಂದಿತು. ವಿಶ್ವಬ್ಯಾಂಕ್‌ನಿಂದ ಸುಮಾರು 560 ಕೋಟಿ ರೂಪಾಯಿಗಳನ್ನು ಸಾಲ ಪಡೆದು, ಆಗಲೇ ಆ ಅಗ್ರಿಮೆಂಟಿಲ್ಲಾ ಮಾಡಿಕೊಂಡು ಕೆಲಸ

ಪ್ರಾರಂಭ ಮಾಡಿದ್ದರು. ವರ್ಲ್ಡ್ ಬ್ಯಾಂಕ್ ನಮಗೆ ಸಾಲ ಕೊಡುವಾಗ ಅಥವಾ ನಮ್ಮ ಹುಡ್ಕೋದವರು ಸಾಲ ಕೊಡುವಾಗ constultancy ಇರಬೇಕೆಂಬ ಷರತ್ತು ಹಾಕುತ್ತಾರೆ. ಮಾನ್ಯ ಬಚ್ಚೇಗೌಡರು ಇಲ್ಲಿದ್ದಾರೆ. ಅವರು ಸಚಿವರಾಗಿದ್ದಾಗ ಹುಡ್ಕೋದಿಂದ ಅನೇಕ ಕುಡಿಯುವ ನೀರಿನ ಯೋಜನೆಗಳಿಗಾಗಿ ಅವರು ಹಣ ತೆಗೆದುಕೊಂಡಿದ್ದರು. ಒಂದು ಷರತ್ತನ್ನು ಆಗ ಹಾಕಲಾಗಿತ್ತು. ತಾವೇ ಇದ್ದಾಗ ಅದು ತೀರ್ಮಾನವಾಗಿದೆ. Consutlancy ಇರಬೇಕೆಂಬುದೇ ಅವರ ಷರತ್ತು ಆಗಿತ್ತು. ಆ ಕಾರಣಕ್ಕಾಗಿ consultancy ಇತ್ತೀಚಿನ ದಿನಗಳಲ್ಲಿ ವ್ಯಾವಹಾರಿಕವಾಗಿ ಮತ್ತು ಕ್ರಮಬದ್ಧವಾಗಿ ನಡೆಯುವುದಕ್ಕೆ ಬೇಕು ಎಂಬುದನ್ನು ನೀವೂ ಒಪ್ಪಿಕೊಂಡಿದ್ದಿರಿ, ನಾವೂ ಅದನ್ನು ಒಪ್ಪಿಕೊಂಡಿದ್ದೇವೆ. ಎಲ್ಲವೂ ಅಲ್ಲ. ನಮ್ಮ ಇಲಾಖೆ ಬಜೆಟ್‌ನಲ್ಲಿ ಕೈಗೆತ್ತಿಕೊಳ್ಳತಕ್ಕಂಥ ಯಾವುದೇ ಟೆಂಡರ್‌ಗೆ consultancy ಇರುವುದಿಲ್ಲ. ವಿಶ್ವ ಸಂಸ್ಥೆಗಳು ಅಥವಾ ಹುಡ್ಕೋದಂತಹ ಸಂಸ್ಥೆಗಳಲ್ಲಿ ಸಾಲ ತೆಗೆದುಕೊಳ್ಳುವಾಗ ಇವತ್ತು ಈ ಷರತ್ತು ಇರುತ್ತದೆ. ಲ್ಯಾಂಡ್ ಆರ್ಮಿ ಬಗ್ಗೆ ಹೇಳಿದ್ದಾರೆ. ನಾವು ಈ ವಿನಾಯಿತಿಯನ್ನು ಕೊಟ್ಟ ತಕ್ಷಣ ಅವತ್ತು ತಪ್ಪು ಮಾಡಿದ್ದರೆ, ಅದನ್ನೆಲ್ಲಾ ಮರೆ ಮಾಚಬೇಕು ಎನ್ನತಕ್ಕಂಥದ್ದು ಏನೂ ಇಲ್ಲ. ಗುತ್ತಿಗೆ ಕೊಟ್ಟರೆ ಅವನು ಕೆಲಸ ಮಾಡದಿದ್ದರೆ ಅವನ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದು ಇದ್ದೇ ಇರುತ್ತದೆ. ಸಾಮಾನು ಸಂಗ್ರಹಣೆ ಮಾಡತಕ್ಕಂಥದ್ದರಲ್ಲಿ ತಪ್ಪು ಮಾಡಿದ್ದರೆ, ಅವನಿಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದು ಇದ್ದೇ ಇರುತ್ತದೆ. ಅದಕ್ಕೆ ವಿನಾಯಿತಿ ಇಲ್ಲ. ಕೇವಲ ವಹಿಸುವುದಕ್ಕೆ ಮಾತ್ರ ಅಥವಾ ಸಂಗ್ರಹಣೆ ಮಾಡುವುದಕ್ಕೋಸ್ಕರ, ಅಷ್ಟಕ್ಕೆ ಮಾತ್ರ ವಿನಾಯಿತಿ ನೀಡಿದ್ದೇವೆಯೇ ವಿನಃ, ಅವನು ಮಾಡಿದಂತಹ ಕೆಲಸ ಕೆಡಲಿ, ಹಾಳಾಗಿ ಹೋಗಲಿ, ಅದನ್ನು ಹಾಗೇ ಬಿಡಬೇಕು ಎನ್ನುವಂತಾದ್ದು ಇಲ್ಲ. ಅದಕ್ಕೇನು ಕಾನೂನು ಕ್ರಮವನ್ನು ನಡೆಸಬೇಕೋ ಅದನ್ನು ನಡೆಸುತ್ತೇವೆ. ಅದಕ್ಕೆ ವಿನಾಯಿತಿಯಂತೂ ಇಲ್ಲವೇ ಇಲ್ಲ. ಕೆಲವು ವಿಚಾರಗಳನ್ನು ತಾವೂ ಹೇಳಿದ್ದೀರಿ, ಮಾನ್ಯ ಸೋಮಶೇಖರ್‌ರವರೂ ಕೂಡ ಹೇಳಿದ್ದಾರೆ. ಅದು ಯಾವ ಸಂದರ್ಭದಲ್ಲಿ ಹೇಗೆ ನಡೆಯುತ್ತದೆ ಎಂಬುದನ್ನು ವಿಚಾರಣೆ ಮಾಡಿ ಬೇಕಾದರೆ ನಾವು ಹೇಳೋಣ.

ಶ್ರೀ ಬಿ.ಸೋಮಶೇಖರ್:- ನಾನು ಪ್ರಸ್ತಾಪ ಮಾಡಿದ್ದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ:- ತಾವೂ ಕೂಡ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ಈಗ ನೀವು ಹೇಳಿದ್ದೀರಿ. ಅದನ್ನು ಸಂಬಂಧಪಟ್ಟವರಿಂದ ನಾವು ಪರಿಶೀಲನೆ ಮಾಡಿಸುತ್ತೇವೆ. ಅದನ್ನು ಮುಚ್ಚುಮರೆ ಮಾಡಬೇಕಾದಂತಹ ಅಗತ್ಯ ಇಲ್ಲ. ಆದ್ದರಿಂದ ಅದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಆದರೆ ಒಂದನ್ನು ತಿಳಿದುಕೊಳ್ಳಿ, ಇವತ್ತು ಲ್ಯಾಂಡ್ ಆರ್ಮಿಯವರಿಗೆ ಒಂದು ಗುತ್ತಿಗೆ ಕೊಡುತ್ತೇವೆ ಎಂದು ತಿಳಿದುಕೊಳ್ಳೋಣ. ನೀವು ಸಬ್ ಕಾಂಟ್ರಾಕ್ಟ್ ಕೊಡಬಾರದು ಎಂದು ಅಗ್ರಿಮೆಂಟ್‌ನಲ್ಲಿ ಇದ್ದರೆ, ಅವನು ಅದನ್ನು ವಾಯ್‌ಲೇಟ್ ಮಾಡಿ, ಸಬ್ ಕಾಂಟ್ರಾಕ್ಟ್ ಕೊಟ್ಟರೆ, he is punishable. He is liable for all penalty. ಆದ್ದರಿಂದ ತಾವು ಹೇಳಿರತಕ್ಕಂಥದ್ದರಲ್ಲಿ ಇದು ಇಲ್ಲ. ನಮ್ಮ ಕಾಂಟ್ರಾಕ್ಟ್ ಅಗ್ರಿಮೆಂಟ್ ವಾಯ್‌ಲೇಟ್ ಮಾಡಿ ಸಬ್ ಕಾಂಟ್ರಾಕ್ಟ್ ಕೊಟ್ಟಿದ್ದರೆ, definitely .....

ಶ್ರೀ ಎ.ರಾಮದಾಸ್:- ದಯವಿಟ್ಟು ಮಾನ್ಯ ಮಂತ್ರಿಗಳು ಒಂದು ನಿಮಿಷ ತಾಳಿ, ತಾವು ಸದನದಲ್ಲಿ ಹೇಳುತ್ತಿದ್ದೀರಿ. ನಾನು 86 ಕೋಟಿ ರೂಪಾಯಿಗಳ ಪೂರ್ಣವಾದಂತಹ

ಅವ್ಯವಹಾರ ಇರುವಂತಾದ್ದರ ಬಗ್ಗೆ ಹೇಳಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ತಾವು ಹೇಳಿದ ಹಾಗೆ entrustment ಅನ್ನು ಬೇರೆ sub contract ಗೆ ಕೊಟ್ಟಿರುವಂತಾದ್ದು, ಬರೀ ರೆಕಾರ್ಡ್ ಮಾತ್ರವಲ್ಲ, ವಿಡಿಯೋ ರೆಕಾರ್ಡ್ ಸಮೇತವಾಗಿ ನಿಮ್ಮ ಮುಂದೆ ಕೊಡುತ್ತೇನೆ. ತಾವು ಇಲ್ಲಿ ಹೇಳಿದ್ದೀರಿ. ಇಷ್ಟೂ ಡಾಕ್ಯುಮೆಂಟ್ ಅನ್ನು ಸ್ಪೀಕರ್ ಮೂಲಕವಾಗಿ ನಾನು ನಿಮ್ಮ ಮುಂದೆ ಕೊಡುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ sub contract ಆಗಿರುವಂತಾದ್ದು, ಕೆಲಸ ತೆಗೆದುಕೊಂಡವರು, ಕೆಲಸ ಮಾಡಿದಂತಹವರು, ಅದಕ್ಕೆ ಸಂಬಂಧಪಟ್ಟಂತಹ ಎಲ್ಲಾ ವಿಚಾರವನ್ನು ಕೊಡುತ್ತೇವೆ. ತಾವು ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೀರಾ?

ಶ್ರೀ ಕಾಗೋಡು ತಿಮ್ಮಪ್ಪ:- ಅದರಲ್ಲೇನಿದೆ? ತಾವು ಒಬ್ಬ ಶಾಸಕನಾಗಿ ಈ ಸದನದಲ್ಲಿ ಇದನ್ನು ವಿಚಾರ ಮಾಡಬೇಕೆಂದು ಹೇಳಿದರೆ, ನಾವು ವಿಚಾರ ಮಾಡುವುದಕ್ಕಾಗುವುದಿಲ್ಲ ಎಂದು ಯಾರಾದರೂ ಹೇಳುವುದಕ್ಕಾಗುತ್ತದೆಯೇ? ಯಾವುದನ್ನೇ ಆಗಲಿ, ಹಗ್ಗಕ್ಕೆ ನೇಣು ಹಾಕಿ ಎಂದಾಕ್ಷಣ ನೇಣು ಹಾಕುವುದಕ್ಕಾಗುತ್ತದೆಯೇ? ವಿಚಾರಣೆ ಮಾಡಬೇಕು, ತಪ್ಪಿತಸ್ಥ ಎಂದು ಕಂಡು ಬಂದ ಮೇಲೆ ಅವನಿಗೆ ಶಿಕ್ಷೆ ವಿಧಿಸುವುದಂತೂ ನಿಶ್ಚಿತ. ನೀವೇನು ಹೇಳಿದ್ದೀರೋ ಅದನ್ನು ವಿಚಾರಣೆ.....

ಶ್ರೀ ಬಿ.ಸೋಮಶೇಖರ್:- ನೀವು ನಾನು ವಿಚಾರಣೆ ಮಾಡಿಸುತ್ತೇವೆ ಎಂದು ಹೇಳಿ. ವಿಚಾರಣೆ ಮಾಡಿ, ಏನಾದರೂ ವಾಯ್‌ಲೇಷನ್ ಆಗಿದ್ದರೆ, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ:- ವಿಚಾರಣೆ ಎಂದರೆ ಎನ್‌ಕ್ವೈರಿ. ಇನ್‌ವೆಸ್ಟಿಗೇಷನ್ ಅನ್ನುವುದೇ ಬೇರೆ, ಎನ್‌ಕ್ವೈರಿ ಅನ್ನುವುದು ಬೇರೆ. ಆದ್ದರಿಂದ ತಾವು ಹೇಳಿರತಕ್ಕಂಥದ್ದನ್ನು ಪೂರ್ವಭಾವಿಯಾಗಿ ತನಿಖೆ ನಡೆಸಬೇಕು. ತನಿಖೆ ನಡೆಸಿ ತಪ್ಪಿತಸ್ಥ ಎಂದು ಕಂಡು ಬಂದರೆ ಕಾನೂನು ಕ್ರಮ ಕೈಗೊಳ್ಳಲೇಬೇಕಾಗುತ್ತದೆ. ಅದನ್ನು ಮುಚ್ಚುಮರೆ ಮಾಡುವುದಕ್ಕಾಗುವುದಿಲ್ಲ. ತಾವು ಹೇಳಿದ್ದನ್ನು ಗಮನಿಸಿದ್ದೇವೆ. ಆದ್ದರಿಂದ ಇದರಲ್ಲಿ ದೊಡ್ಡ ಡೀವಿಯೇಷನ್ ಆಗಿದೆ ಎಂದು ನಾನೇನೂ ಭಾವಿಸುವುದಿಲ್ಲ. ಆದರೂ ಸರ್ಕಾರಕ್ಕೆ ಸೂಚ್ಯವಾಗಿ, ಇಂತಹ ಒಂದು ಕಾನೂನನ್ನು ನೀವು ತಂದಿದ್ದೀರಿ, ಅದನ್ನು ಪರಿಪಾಲನೆ ಮಾಡಬೇಕು, ಕಟ್ಟುನಿಟ್ಟಾಗಿ ನಡೆಸಬೇಕು ಎಂದು ಏನು ಎಚ್ಚರಿಕೆ ಮಾತನ್ನು ಕೊಟ್ಟಿದ್ದೀರಿ. ಅದನ್ನು ಸಂಪೂರ್ಣವಾಗಿ ನಾನು ಒಪ್ಪಿಕೊಳ್ಳುತ್ತೇವೆ. ಅದರಲ್ಲಿ ಭಿನ್ನಾಬಿಪ್ರಾಯ ಇಲ್ಲ, ಆರು ತಿಂಗಳು ಕಳೆದು ಹೋಗಿದೆ. ಇನ್ನು ಆರು ತಿಂಗಳು ಮಾತ್ರ ಉಳಿದಿದೆ. ಕೆಲವು ಕಡೆ ಏನಾಗಿದೆ ಎಂದರೆ, ಉದಾಹರಣೆಯೊಂದು ನನ್ನ ನೆನಪಿಗೆ ಬರುತ್ತಿದೆ, ನಾವು antibiotic ಅನ್ನು ಇನ್ನೂ ಪರ್ಚೇಸೇ ಮಾಡಿಲ್ಲ. ಈಗ ಬರಗಾಲ ಬಂದಿದೆ, ಕೆಲವು ಕಡೆ ಆಗಿದೆ. ಸರ್ಕಾರದ ಕಂಪನಿಗಳಿಂದ ಸ್ವಲ್ಪ ಮಟ್ಟಿಗೆ ಪರ್ಚೇಸ್ ಮಾಡುವಂತಾದ್ದು ಇರುತ್ತದೆ. ಇಂತಹ ಸಣ್ಣ ಅನಿವಾರ್ಯವಾದಂತಹ ಪ್ರಸಂಗಕ್ಕೆ ಮಾತ್ರ ಈ ಮಸೂದೆ ಅನ್ವಯಿಸುವುದೇ ವಿನಃ ಹೆಚ್ಚಿಗೆ ಇಲ್ಲ. ಆ ದೃಷ್ಟಿಯಿಂದ ನಮ್ಮ ಕೂಸನ್ನು ನಾವು ಕತ್ತು ಹಿಸುಕಿ-ಸಾಯಿಸುವುದಕ್ಕೆ ತಯಾರಿಲ್ಲ. ಯಾವ ತಾಯಿಯೂ ಕೂಡ ತನ್ನ ಮಗುವನ್ನು ಸಾಯಿಸುವುದಿಲ್ಲ. ತಾಯಿಗೆ ಆ ಶಿಶುವಿನ ಬಗ್ಗೆ ಪ್ರೀತಿ-ವಾತ್ಸಲ್ಯ ಇರುವಷ್ಟು ಬೇರೆಯವರಿಗೆ ಇರುವುದೇ ಇಲ್ಲ. ಆದರೆ ನಾವು ತಂದಿರತಕ್ಕಂಥ ಕಾನೂನಿನ ಬಗ್ಗೆ ನಮಗೆ ಪ್ರೀತಿ ವಾತ್ಸಲ್ಯಗಳು ಜಾಸ್ತಿ ಇವೆ. ಕಟ್ಟುನಿಟ್ಟಾಗಿ ಇದನ್ನು ಪರಿಪಾಲನೆ ಮಾಡುತ್ತೇವೆ. ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಇದು ಸಮಾಧಾನ ತರುವಂತಹ ಉತ್ತರವಲ್ಲ. ಸುಮ್ಮನೆ ಮೇಲೆ ಸಾರಿಸುವಂತಹ ಕೆಲಸವನ್ನು ಮಾಡಿದರು ಅಷ್ಟೇ. ಇಲ್ಲಿ ನಾವೇನು ಹೇಳುತ್ತಿದ್ದೇವೆ ಎಂದರೆ.....

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಲ್ಯಾಂಡ್ ಆರ್ಮಿಗೆ, ಪಬ್ಲಿಕ್ ಅಂಡರ್‌ಟೇಕಿಂಗ್‌ಗೆ exemption ಕೊಡತಕ್ಕಂಥದ್ದು ಸರಿಯಲ್ಲ ಎಂದು ಹೇಳಿದಿರಿ. ಕೇಂದ್ರ ಸರ್ಕಾರದಲ್ಲೂ ಕೂಡ ಇಂತಹವೇ organizations ಇವೆ. ಉದಾಹರಣೆಗೆ ರೈಲ್ವೆ ಡಿಪಾರ್ಟ್‌ಮೆಂಟ್ ಇದೆ. ಈಗ ಅವರು ಹೇಳಿದ ಹಾಗೆ HCL ಇದೆ. Several companies are there. Education consultancy ಇದೆ. ಅವಕ್ಕೂ ಕೂಡ ಇದೇ ರೀತಿಯಾಗಿ ಕೊಡ್ತಾರೆ. ಅವುಗಳ ಮೂಲಕವೇ ಕೇಂದ್ರ ಸರ್ಕಾರದ ಕೆಲಸ ಕೂಡ ನಡೆಯುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಇದರ ಬಗ್ಗೆ ನಮ್ಮದೇನೂ ತಕರಾರಿಲ್ಲ. ಟ್ರಾನ್ಸ್‌ಫರೆನ್ಸಿ ಆ್ಯಕ್ಟ್‌ನ್ನು ಕರ್ನಾಟಕದಲ್ಲಿ ತಂದಂಥ ಹೆಗ್ಗಳಿಕೆ, ಕೀರ್ತಿ, ಕಿರೀಟ ಮತ್ತು ಆ ಕಿರೀಟದ ಮೇಲೆ ಒಂದು ಹೂ ಎಲ್ಲಾ ನಿಮ್ಮದೇನೇ. ಆ ಕೀರ್ತಿಯನ್ನು ತೆಗೆದುಕೊಂಡು ನೀವು ಚುನಾವಣೆಗೆ ಹೋಗಿ, ನಮ್ಮದೇನೂ ತಕರಾರಿಲ್ಲ. ನೀವು ಇದನ್ನು ದೆವ್ವ ಎಂದು ತೋರಿಸಿ ಭ್ರಷ್ಟಾಚಾರವನ್ನು ಇನ್ನೂ ಹೆಚ್ಚು ಮಾಡುತ್ತಿದ್ದೀರಿ ಎಂದು ನಾನು ಹೇಳುತ್ತಿರುವುದು.

ಶ್ರೀ ಕಾಗೋಡು ತಿಮ್ಮಪ್ಪ:- ಅಲ್ಲ ಹೀಗೆ ಹೇಳಿದರೆ.... ಈ ವಿಚಾರದಲ್ಲಿ ಒಂದು ದಿವಸವಾದರೂ ಕರೆದು ಮುಖ್ಯಮಂತ್ರಿಗಳಿಗೆ ಕಿರೀಟ ಹಾಕಿದ್ದಾರೆಯೇ? ಸುಮ್ಮನೆ ಹೇಳ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- 250 ಕೋಟಿ ರೂ.ಗಳ ಪರ್ಚೇಸ್‌ಗೆ ಯಾರನ್ನು ಕೇಳಿ ನೀವು ಎಕ್ಸ್‌ಂಪ್‌ಶನ್ ಕೊಟ್ಟಿರಿ? What are the considerations you have given? The Chief Minister has replied to me in writing. ಅದರ ಬಗ್ಗೆ ಈಗ ನಾನು ಮಾತನಾಡುವುದಕ್ಕೆ ಹೋಗುತ್ತಿಲ್ಲ. ಏಕೆಂದರೆ ಯಾವ ಯಾವ ಕನ್ಸಿಡರೇಶನ್‌ನಲ್ಲಿ ಮಾಡಿದ್ದೀರಿ ಎಕ್ಸ್‌ಂಪ್‌ಶನ್ ಎನ್ನತಕ್ಕಂಥದ್ದನ್ನು ಬಜೆಟ್ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ನಾನು ಮಾತನಾಡುತ್ತೇನೆ. ಬಿಲ್ ಬಗ್ಗೆ ಇರತಕ್ಕಂಥದ್ದು, ಸುಮ್ಮನೆ ಜನಗಳಿಗೆ ಡೋಖಾ ಮಾಡೋಕೇ ಹೋಗಬೇಡಿ. ಮೋಸದ ಮಾತುಗಳನ್ನು ಆಡುವುದಕ್ಕೆ ನೀವು ಹೋಗಬೇಡಿ. ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್‌ಗಳನ್ನೆಲ್ಲಾ ಮುಚ್ಚಿಬಿಡುತ್ತಿದ್ದೀರಿ. ಅಲ್ಲೇನು ಟ್ರಾನ್ಸ್‌ಫರೆನ್ಸಿ ಆ್ಯಕ್ಟ್ ಬರುತ್ತದೆ? ಏನು ಪರ್ಚೇಸ್ ಇದೆ ಸ್ವಾಮಿ ಅಲ್ಲಿ? ಎಲ್ಲಾ ಸುಮ್ಮನೆ ಪ್ರಚಾರಕ್ಕೆ ಇದನ್ನು ಮಾಡುತ್ತಿರುವುದು. ಈ ಟ್ರಾನ್ಸ್‌ಫರೆನ್ಸಿ ಆ್ಯಕ್ಟ್ ಬಗ್ಗೆ ನಾಳೆ ದಿನ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ, ಓ ನೋಡಪ್ಪಾ ಸರ್ಕಾರ ಎಷ್ಟೊಂದು ಹಾನೆಸ್ಟು, ಬಿಲ್‌ನ್ನು ತರುತ್ತಿದ್ದಾರೆ, ಹರಿಶ್ಚಂದ್ರನ ಸರ್ಕಾರ ಇದು ಎಂದು ಅನ್ನಿಸಿಕೊಳ್ಳುವುದಕ್ಕೆ ಏಕೆ ಈ ರೀತಿಯೆಲ್ಲಾ ನಾಟಕವಾಡ್ತೀರಾ ನೀವು ಎಂದಷ್ಟೇ ನಾನು ಹೇಳಿದ್ದು.

ಶ್ರೀ ಸಿ. ಬೈರೇಗೌಡ:- ಮಾನ್ಯ ಉಪಾಧ್ಯಕ್ಷರೇ, ನಾನು ಈಗಾಗಲೇ ಕೆಲವು ಉದಾಹರಣೆಗಳನ್ನು ಕೊಟ್ಟು ನೇರವಾಗಿ ಹೇಳಿದ್ದೇನೆ. ಈಗ ಬೇಕಾದಷ್ಟು ಜನ ಕಂಟ್ರಾ ಕ್ಟ್‌ದಾರರು ಬಿಡ್ ಮಾಡುತ್ತಿರುವ ಹಾಗೆ ಲ್ಯಾಂಡ್ ಆರ್ಮಿ ಕಾರ್ಪೊರೇಷನ್‌ನವರು ಕೂಡ ಬಿಡ್ ಮಾಡಲಿ.

ಶ್ರೀ ಕಾಗೋಡು ತಿಮ್ಮಪ್ಪ:- ಹಿಂದೆ ನೀವು ಈ ಕಾನೂನನ್ನು ಒಪ್ಪಿದ್ದರಲ್ಲವೇ? ಆಗ ಹಿಂದೆ ಎರಡೂ ವರ್ಷ ವಿನಾಯಿತಿಯನ್ನು ಕೊಟ್ಟಿರಲಿಲ್ಲವೆ?

ಶ್ರೀ ಸಿ. ಭೈರೇಗೌಡ:- ಸ್ವಲ್ಪ ತಡೀರಿ. ಈಗ ಬೇರೆ ಯಾರೂ ಕೆಲಸ ಮಾಡುವುದಕ್ಕೆ ತಯಾರಿಲ್ಲದಿದ್ದರೆ ಆಗ ಸರ್ಕಾರಿ ಸ್ವಾಮ್ಯದ ಸಂಸ್ಥೆ, ಬಹಳ ಪ್ರೀತಿಯಿಂದ ಸಾಕಿರತಕ್ಕಂಥದ್ದು.

ನಿಮ್ಮ ಸಂಸ್ಥೆ ಎಂದಮೇಲೆ, ಆ ನಿಮ್ಮ ಸಂಸ್ಥೆ ಮೇಲೆ ನಿಮಗೆ ಪ್ರೀತಿ ಇದ್ದೇ ಇರುತ್ತದೆ. ಆದ್ದರಿಂದ ಆ ನಿಮ್ಮ ಕೂಸಿಗೆ ಅಗತ್ಯವಾದ ಎಲ್ಲಾ ಪೋಷಣೆಗಳನ್ನು ಕೊಡಬೇಕಾಗುತ್ತದೆ, ಅದನ್ನು ಕೊಟ್ಟುಕೊಳ್ಳಿ. ಆದರೆ ಅವರಿಗಿಂತ ಬೇರೆಯವರು ಕಡಿಮೆ ದರದಲ್ಲಿ ಕೆಲಸ ಮಾಡುವುದಕ್ಕೆ ತಯಾರಿರುವಾಗ ನೀವು ಸರ್ಕಾರಿ ಆಜ್ಞೆಯನ್ನು ಮಾಡಿ ಈ ಕೆಲಸವನ್ನು ಆ ಸಂಸ್ಥೆಯವರಿಗೇ ಏಕೆ ಒಪ್ಪಿಸಬೇಕು? ಅಂಥ ಕೆಲಸವನ್ನು ತಾವು ಏಕೆ ಮಾಡುತ್ತಿದ್ದೀರಿ? ಈಗ ಕೆರೆ ಹೂಳೆತ್ತುವ ಕೆಲಸ, 30 ಲಕ್ಷಕ್ಕಿಂತ ಹೆಚ್ಚಿಗೆ ಬಂದರೆ ಅದನ್ನು ಲ್ಯಾಂಡ್ ಆರ್ಮಿಗೆ ಕಾರ್ಪೊರೇಶನ್‌ಗೆ ಕೊಡಬೇಕು ಎಂದು ಸರ್ಕಾರಿ ಆಜ್ಞೆಯಾಗಿದೆ. ಏಕೆ ಆ ರೀತಿಯಾದಂಥ ಕೆಲಸವನ್ನು ಮಾಡುತ್ತೀರಿ? ನೀವು ಆ ಕೆಲಸಕ್ಕೆ ಬಿಡ್ ಮಾಡಿಸಿ. ಕಡಿಮೆ ದರದಲ್ಲಿ ಮಾಡತಕ್ಕಂಥವರು ಇದ್ದಾರೆ. ಸರ್ಕಾರಕ್ಕೆ ಇದರಿಂದ ಉಳಿತಾಯವಾಗತಕ್ಕಂಥದ್ದು ಇದೆ. ಈ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಕೂಡ ಕಂಟ್ರಾ ಕ್ಟರ್ ಆಗಿದ್ದಾರೆ. ಆದರೆ ಒಬ್ಬ ಖಾಸಗಿ ಕಂಟ್ರಾ ಕ್ಟ್‌ದಾರರಿಗೆ ಇಲ್ಲದೇ ಇರತಕ್ಕಂಥ ಸವಲತ್ತನ್ನು ಇವರಿಗೆ ಏಕೆ ಕೊಟ್ಟು ಸರ್ಕಾರದ ಟ್ರೆಷರಿಯಿಂದ ಅವರನ್ನು ಸಾಕತಕ್ಕಂಥ ಕೆಲಸವನ್ನು ತಾವೇಕೆ ಮಾಡುತ್ತೀರಿ? ಅಲ್ಲಿರತಕ್ಕಂಥವರು ಕೆಲಸ ಮಾಡಲಿ. ಅವರು ತಮ್ಮ ಎಫಿಶಿಯೆನ್ಸಿಯನ್ನು ತೋರಿಸಲಿ. ಅವರು ತಮ್ಮ ಸ್ಕಿಲ್ ತೋರಿಸಲಿ. ಸರ್ಕಾರಕ್ಕೆ ಆ ಮೂಲಕ ಹಣವನ್ನು ಉಳಿಸತಕ್ಕಂಥ ಕೆಲಸವನ್ನು ಅವರು ಮಾಡಲಿ. ಆದುದರಿಂದ ತಾವೇನು ಹೇಳಿದ್ದೀರಿ ಆ ರೀತಿಯಾದಂಥ ಎಕ್ಸ್‌ಂಪ್‌ಶನ್‌ನ್ನು ನಾವು ಕೊಡುವುದಿಲ್ಲ. ಟೆಂಡರ್ ಕರೆದಂಥ ಸಂದರ್ಭದಲ್ಲಿ ಅವರೂ ಕೂಡ ಟೆಂಡರ್‌ಗೆ ಅರ್ಜಿ ಹಾಕಲಿ ಮತ್ತು ಪಾರ್ಟಿಸಿಪೇಟ್ ಮಾಡಲಿ ಎಂದು ಹೇಳಿ. ಆ ಮೂಲಕ ಆ ರೀತಿಯಾದಂಥ ಕೆಲಸವನ್ನು ಅವರಿಗೆ ಕೊಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಬೈರೇಗೌಡರೆ, ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಈ ಕೆರೆ ಹೂಳೆತ್ತುವ ಕೆಲಸಕ್ಕೆ ಸಂಬಂಧಪಟ್ಟಂತೆ ಇತ್ತೀಚೆಗೆ ಒಂದೊಂದು ಮತಕ್ಷೇತ್ರಕ್ಕೆ ಒಂದೊಂದು ಮಾಡಬೇಕೆಂದು ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಆ ಪ್ರಕಾರ 192 ಕೆರೆಗಳಲ್ಲಿ ಹೂಳೆತ್ತುವ ಕೆಲಸವನ್ನು ಮಾಡಬೇಕೆಂದು ಹೇಳಿದಾಗ ಅದಕ್ಕೆ ಹಣದ ಕೊರತೆ ಇತ್ತು ಎಂಬುದು ತಮಗೆಲ್ಲಾ ಗೊತ್ತಿದೆ. ಆದರೆ ಇದನ್ನು ನಾವು ಬರಗಾಲ ಕಾಮಗಾರಿಗಳ ಜೊತೆಯಲ್ಲಿ ಜೋಡಿಸಿ ಕರ್ನಾಟಕ ನೀರಾವರಿ ನಿಗಮದಿಂದ ಸ್ವಲ್ಪ ಹಣವನ್ನು ಕೊಡಿಸಿ ಇದನ್ನು ಬೇಸಿಗೆಯಲ್ಲಿ ಮಾತ್ರ ಮಾಡಿದರೆ ನಾವು ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಬಾಕಿ ಟೈಮ್‌ನಲ್ಲಿ ಮಾಡುವುದಕ್ಕಾಗುತ್ತದೆಯೇ? ಅದಕ್ಕಾಗಿ ಇದನ್ನು ವಿಶೇಷವಾಗಿ ಕ್ಯಾಬಿನೆಟ್ ಮುಂದೆ ಇಟ್ಟು ಈಗ ಸಧ್ಯಕ್ಕೆ ಪ್ರತಿಯೊಂದು ಮತ ಕ್ಷೇತ್ರದಲ್ಲಿ ಇದು ನಡೆಯಲಿ ಎಂದು ಹೇಳಿಯೇ ಅದರಲ್ಲಿ ಮೂರು ಭಾಗಗಳನ್ನು ನಾವು ಮಾಡಿದ್ದೇವೆ. ಇದರಲ್ಲಿ ಒಂದು ಭಾಗ ಚೀಪ್ ಇಂಜಿನಿಯರ್ ನಾರ್ತ್ ಕಡೆಗೆ, ಒಂದು ಭಾಗ ಸೌತ್‌ಗೆ ಮತ್ತು ಒಂದು ಭಾಗ ಲ್ಯಾಂಡ್ ಆರ್ಮಿಗೆ ಕೊಟ್ಟು ಏಕ ಕಾಲದಲ್ಲಿ ಕೆಲಸ ನಡೆಯಲಿ ಎಂದು ನಾವು ಈ ರೀತಿ ಮಾಡಿದ್ದೇವೆ. ಇದು ತಪ್ಪೇ? ಈ ರೀತಿಯ ಬರಗಾಲದಲ್ಲಿ ಈ ಕೆಲಸವನ್ನು ಕಂಟ್ರಾ ಕ್ಟ್‌ರ್‌ಗಳಿಗೆ ಕೊಟ್ಟು ಮಾಡಿಸುವುದಕ್ಕಾಗುತ್ತದೆಯೇ? ನೀವೇ ಹೇಳಿ. ಆದ್ದರಿಂದ ಕೆಲವು ಇಂಥದ್ದನ್ನು ಎಮರ್‌ಜೆನ್ಸಿ ಇದ್ದಾಗ ಕೊಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಮಾಡಿದ್ದೇವೆಯೇ ಹೊರತಾಗಿ ಬೇರೆ ರೀತಿಯಿಂದಲ್ಲ. ಅದೇ ರೀತಿಯಾಗಿ ಜಿಲ್ಲಾ ಪಂಚಾಯತ್‌ನಲ್ಲಿ ಮತ್ತು ಮೈನರ್ ಇರಿಗೇಶನ್‌ನಲ್ಲಿ ತಮ್ಮ ತಮ್ಮ ಮತ ಕ್ಷೇತ್ರಗಳಲ್ಲಿ 50, 60 ಲಕ್ಷ ರೂ.ಗಳ ಕೆಲಸವನ್ನು ಪ್ರಾರಂಭ ಮಾಡಿಸಿದ್ದೇವೆ.

ಶ್ರೀ ಸಿ.ಭೈರೇಗೌಡ:- ಈ ರೀತಿಯ ವಾದವನ್ನು ಒಪ್ಪಿಕೊಳ್ಳುವುದಕ್ಕೆ ನಾವು ತಯಾರಿಲ್ಲ. ಏಕೆಂದರೆ, ನೀವೇ ಹೇಳಿದ್ದೀರಿ, ಚೀಫ್ ಇಂಜಿನಿಯರ್ ನಾರ್ತ್‌ಗೆ ಇಷ್ಟು ಕೊಟ್ಟಿದ್ದೇವೆ, ಸೌತ್‌ಗೆ ಇಷ್ಟು ಕೊಟ್ಟಿದ್ದೇವೆ ಮತ್ತು ಇನ್ನೊಂದು ಭಾಗ ಲ್ಯಾಂಡ್ ಆರ್ಮಿ ಕಾರ್ಪೊರೇಶನ್‌ಗೆ ತಾವು ಕೊಟ್ಟಿದ್ದೀರಿ. ಇದನ್ನು ನೀವೇ ಈಗ ಹೇಳಿದಿರಿ. ಆ ಚೀಫ್ ಇಂಜಿನಿಯರ್ ಯಾವ ಆಧಾರದ ಮೇಲೆ ಕೆಲಸ ಮಾಡುತ್ತಾರೆ? ಹೇಳಿ.

Sri Mallikarjuna Kharge:- Under Section 4(A) ಕೆಳಗೆ ಏನು exemption ಇದೆ ಅದರ ಕೆಳಗಡೆ.

ಶ್ರೀ ಕಾಗೋಡು ತಿಮ್ಮಪ್ಪ- ಈಗ ನಿಮ್ಮ ಪ್ರಿನ್ಸಿಪಲ್‌ನ್ನು ನಾವು ಅಕ್ಸ್‌ಫ್ಟ್ ಮಾಡುತ್ತೇವೆ. ಅದರಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಈ ಎಕ್ಸ್‌ಂಪ್‌ಶನ್ ಇರುವುದು for a limited period. ಆರು ತಿಂಗಳ ಕಾಲ ಅಷ್ಟೇ ಇದರಲ್ಲಿ ಇರುವುದು.

(ಗೊಂದಲ)

ಶ್ರೀ ಸಿ.ಭೈರೇಗೌಡ:- ಅಲ್ಲ ಸ್ವಾಮಿ, ಸರ್ಕಾರದ ಹಣ ಪೋಲಾಗುತ್ತಿದೆ ಎಂಬುದನ್ನು ಉದಾಹರಣೆ ಸಮೇತ ತೋರಿಸಿ ಕೊಡುತ್ತಿದ್ದೇವೆ. ಇಲ್ಲ, ನಾವು ಇದನ್ನುಮಾಡೋದಕ್ಕೆ ಇರೋದು ಎಂದರೆ ಹೇಗೆ? ನಿಮಗೆ ಬಹುಮತ ಇದೆ ಎಂದುಕೊಂಡು, ನಾವು ಹೀಗೇನೇ ಮಾಡೋದು ಎಂದರೆ ಸರ್ಕಾರಕ್ಕೆಈ ವಿಚಾರದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಸಾರ್ವಜನಿಕರ ಹಣವನ್ನು, ಸರ್ಕಾರದ ಹಣವನ್ನು ಪೋಲು ಮಾಡುವುದಕ್ಕೆ ನೀವು ಅಲ್ಲಿ ಕುಳಿತಿಲ್ಲ ತಿಳ್ಕೊಳ್ಳಿ. ಆದರೆ ಇವೊತ್ತು ಹಣ ಪೋಲಾಗುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ:- ನೀವು ಐದು ವರ್ಷ ಇದ್ರಲ್ಲಾ ಆಗ ಲ್ಯಾಂಡ್ ಆರ್ಮಿಗೆ ಕೆಲಸ ಕೊಟ್ಟಿರಲಿಲ್ಲವೆ?

ಶ್ರೀ ಸಿ.ಭೈರೇಗೌಡ:- ಆಗ ಈ ರೀತಿ ಮಾಡಿದ್ದರೂ ಕೂಡ ಅದು ತಪ್ಪೇನೇ?

ಶ್ರೀ ಕಾಗೋಡು ತಿಮ್ಮಪ್ಪ:- ಆಗ ನಿಮಗೆ ಇದು ಒಂದು ಸಂಸ್ಥೆ, ಇದು ಬದುಕಬೇಕು, ಅದಕ್ಕೋಸ್ಕರ ಕೊಡಬೇಕು ಎಂದು ಕನ್‌ಸರ್ನ್ ಇತ್ತು.

ಶ್ರೀ ಸಿ.ಭೈರೇಗೌಡ:- ಅವೊತ್ತಿನ ದಿವಸ ಈ ವಿಚಾರವನ್ನು ನೀವು ಎತ್ತಲಿಲ್ಲ. ಆದರೆ ಇವೊತ್ತುಅನುಭವದ ಆಧಾರದ ಮೇಲೆ ಈ ಮಾತನ್ನು ಹೇಳುತ್ತಾ ಇದ್ದೇವೆ. ನೀವು ಅಲ್ಲಿ ಕುಳಿತಿರತಕ್ಕಂಥದ್ದು ಸರ್ಕಾರದ ಹಣವನ್ನು ಪೋಲು ಮಾಡುವುದಕ್ಕಲ್ಲ. ಇದನ್ನು ದಯವಿಟ್ಟು ತಿಳಿದುಕೊಳ್ಳಿ.

ಶ್ರೀ ಸಿ.ಚೆನ್ನಿಗಪ್ಪ:- ಬರಗಾಲದ ಕೆಲಸವನ್ನು ಮಾಡಲಿ ಸಾರ್, ಬರಗಾಲದ ಕೆಲಸ ಮಾಡುವುದಕ್ಕೆ ಟೆಂಡರ್ ಬೇಕಾಗುವುದಿಲ್ಲ. ಆದರೆ ಬೇರೆ ಕೆಲಸಗಳನ್ನು ಟೆಂಡರ್ ಮೂಲಕ ಮಾಡಿಸದಿದ್ದರೆ ಹೇಗೆ ಕೆಲಸವಾಗುತ್ತದೆ ಸಾರ್.

ಶ್ರೀ ಕಾಗೋಡು ತಿಮ್ಮಪ್ಪ- ಚಿನ್ನಿಗಪ್ಪನವರೆ, ನಾನು ಆಗಲೇ ಹೇಳಿದ್ದೇನೆ. ಸರ್ಕಾರದಿಂದ ಗುತ್ತಿಗೆ ಮತ್ತು ಸರಕುಗಳನ್ನು ಕೊಳ್ಳುವಂಥ ಒಟ್ಟಾರೆ ವ್ಯವಹಾರದ ಮೊತ್ತ ಇರುತ್ತದಲ್ಲಾ ಅದನ್ನು ಲೆಕ್ಕ ಹಾಕಿದರೆ ಈ ಸರ್ಕಾರಿ ಸ್ವಾಮ್ಯಕ್ಕೆ ಕೊಡತಕ್ಕಂಥದ್ದು ನಾಟ್ ಈವನ್ ಟೆನ್ ಪರ್ಸೆಂಟ್. ಉಳಿದುದೆಲ್ಲಾ ಈ ಟ್ರಾನ್ಸ್‌ಫರೆನ್ಸ್ ಆಕ್ಟ್ ಪ್ರಕಾರ ನಡೆಯುತ್ತಿದೆಯೋ ಇಲ್ವೋ? ಅದಕ್ಕೇ ಈ ಆಕ್ಟ್‌ನಲ್ಲಿ ಇಂಥ ಒಂದು ಪ್ರಿನ್ಸಿಪಲ್ ಅಡಾಪ್ಟ್ ಮಾಡಿದೆ. ಎನ್ನುವ ಕಾರಣಕ್ಕಾಗಿ Just for extending the Period, we have brought this amendment.

ಶ್ರೀ ಸಿ.ಬೈರೇಗೌಡ:- ಒಂದು ನಿಮಿಷ ತಾವು ದಯವಿಟ್ಟು ಕುಳಿತುಕೊಳ್ಳಿ. ಸರ್ಕಾರದ ಹಣ ಪೋಲಾಗುತ್ತಿದೆ ಎಂಬುದಕ್ಕೆ ಪುಷ್ಟೀಕರಿಸಲು ನಾನು ಆಗಲೇ ಉದಾಹರಣೆ ಕೊಟ್ಟಿದ್ದೇನೆ. ಅದನ್ನು ಮತ್ತೊಮ್ಮೆ ನಾನು ಪುನರುಚ್ಚರಿಸಲು ಇಚ್ಛಿಪಡುತ್ತೇನೆ. ಮಾನ್ಯ ಖರ್ಗೆಯವರು ಏನು ಹೇಳಿದರು? ಇವೊತ್ತು ಬರ ಬಂದಿರುವ ಕಾರಣದಿಂದ ಮೂರು ಭಾಗವಾಗಿ ಮಾಡಿ ಹಂಚಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಸ್ವಾಮಿ, ಪ್ರಧಾನಮಂತ್ರಿಗಳ ಗ್ರಾಮ ಸಡಕ್ ಯೋಜನೆ ಇದರಲ್ಲಿ ಸೇರಿದೆಯೇ? ಟೆಂಡರ್ ಕರೆದಿಲ್ವಾ ಅದಕ್ಕೆ? ಹಾಗಾದರೆ ಅವರಿಗೆ ಅಂಥ ಕೆಲಸಗಳನ್ನು ಏಕೆ ಕೊಡ್ತೀರಾ? ಇವೊತ್ತಿನ ದಿವಸ ಅರ್ಜೆಂಟ್ ಇದೆ, ಎಮರ್ಜೆನ್ಸಿ ಇದೆ, ಕೊಟ್ಟಿರಬಹುದು, ಅದನ್ನೂ ಕೂಡ ನಾನು ಒಪ್ಪುವುದಿಲ್ಲ. ಆದರೆ ಅದಕ್ಕೇನೋ ಒಂದು ನೆಪವನ್ನು ಹೇಳುತ್ತಿದ್ದೀರಿ. ಆದರೆ ಪ್ರಧಾನಮಂತ್ರಿಗಳ ಗ್ರಾಮ ಸಡಕ್ ಯೋಜನೆ ಅದು ಯಾವುದರಲ್ಲೂ ಬರುವುದಿಲ್ಲ, ಟೆಂಡರನ್ನು ಕರೆದೇ ಕೆಲಸವನ್ನು ಕೊಡಬೇಕಾಗುತ್ತದೆ. ಅದು ರಾಜ್ಯ ಸರ್ಕಾರದ ಹಣವಲ್ಲ, ಕೇಂದ್ರ ಸರ್ಕಾರದ ಹಣ. ಕೇಂದ್ರ ಸರ್ಕಾರದ ಹಣವನ್ನು ನೀವು ಪೋಲು ಮಾಡುವುದಕ್ಕೆ ನಿಮಗೆ ಅಧಿಕಾರ ಎಲ್ಲಿದೆ?

ಶ್ರೀ ಕಾಗೋಡು ತಿಮ್ಮಪ್ಪ:- ಯಾರು ಪೋಲು ಮಾಡುತ್ತಿದ್ದಾರೆ? ಎಲ್ಲಿ ಪೋಲು ಮಾಡುತ್ತಿದ್ದಾರೆ?

ಶ್ರೀ ಸಿ.ಬೈರೇಗೌಡ:- ನೀವು ನಮ್ಮ ಜೊತೆ ಬರುವುದಕ್ಕೆ ತಯಾರಿದ್ದೀರಾ? ಬನ್ನಿ, ನಾನು ತೋರಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ತೋರಿಸಿ, ಹೇಳಿ, ಯಾರು ಪೋಲು ಮಾಡಿದ್ದಾರೆ ಹೇಳಿ?

ಶ್ರೀ ಸಿ.ಬೈರೇಗೌಡ:- ಮಾನ್ಯ ಉಪಾಧ್ಯಕ್ಷರೆ, ನಾನು ಆಗಲೇ ಹೇಳಿದ್ದೇನೆ. ನನ್ನ ಕ್ಷೇತ್ರದಲ್ಲಿಯೇ ಎಷ್ಟಾಯಿತು; ಎಷ್ಟಕ್ಕೆ ಅಂದಾಜು ಮಾಡಿದ್ದರು, ಆಮೇಲೆ ಏನಾಯಿತು ಎಂಬುದನ್ನು ಉದಾಹರಣೆ ಸಮೇತ ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಈಗ ಸಾವಿರದಲ್ಲಿ ಒಂದು ನಡೆದಿರಬಹುದು. ನಡೆಯುವವನು ಎಡವಿಯೇ ಎಡವುತ್ತಾನೆ.

ಶ್ರೀ ಸಿ.ಬೈರೇಗೌಡ:- ಈ ರೀತಿಯಲ್ಲಿ ಮೊಂಡುವಾದವನ್ನು ಮಾಡಿದರೆ ಏನು ಹೇಳಬೇಕು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ:- ಇದು ಮೊಂಡುವಾದವೇ? ಪ್ರಾಮಾಣಿಕವಾಗಿ ರಿಯಲ್ ಫ್ಯಾಕ್ಟ್‌ನ್ನು ಹೇಳಿದ್ದು. ಹಿಂದೇನೂ ನಡೆದಿದೆ, ನಮ್ಮಲ್ಲೂ ನಡೆದಿದೆ. ನಿಮ್ಮಲ್ಲೂ ನಡೆದಿದೆ. ನಡೆದೇ ನಡೆಯುತ್ತದೆ. ಆದ್ದರಿಂದ ಯಾರು ತಪ್ಪು ಮಾಡುತ್ತಾನೋ ಅವನು ನೀರು ಕುಡಿದೇ ಕುಡಿಯುತ್ತಾನೆ. ಅದಕ್ಕೇನು ಮಾಡ್ಬೇಕೋ ಶಾಸ್ತಿ ಮಾಡೋಣ.

ಶ್ರೀ ಸಿ.ಬೈರೇಗೌಡ:- ಅದು ಇಲ್ಲದೇ ಇರೋದ್ರಿಂದಾನೇ ನಾವು ಇವೊತ್ತು ಇಲ್ಲಿ ಇಷ್ಟು ಕಂಠಶೋಷಣೆ ಮಾಡ್ಬೇಕಾಗಿದೆ.

ಶ್ರೀ ಎ.ರಾಮದಾಸ್:- ಮಾನ್ಯ ಉಪಾಧ್ಯಕ್ಷರೆ, ಇವೊತ್ತಿನಿಂದ ಆರು ತಿಂಗಳವರೆಗೆ ಈ ಬಿಲ್ಲು ಎಂದು ಹೇಳಿದರು. ಆದರೆ ಒಂದು ಪ್ರಶ್ನೆ ಇದರ ಹಿಂದೆ ಏನಿದೆ ಎಂದರೆ 2002ನೇ ಆಗಸ್ಟ್ 20ಕ್ಕೆ ಟ್ರಾನ್ಸ್‌ಫರೆನ್ಸಿ ಆಕ್ಟ್‌ನಲ್ಲಿ ಕೊಟ್ಟಂಥ ಎಕ್ಸ್‌ಂಪ್‌ಶನ್ ಹೋಯಿತು. ಆದರೆ

2002ನೇ ಇಸವಿ ಆಗಸ್ಟ್‌ನಿಂದ ಇಲ್ಲಿಯವರೆಗೆ ಮಾಡಿದ್ದಾರಲ್ಲಾ ಅವ್ಯವಹಾರ ಅದಕ್ಕೇ ನೀವು ಕ್ಲಿಯರೆನ್ಸ್ ಕೊಡ್ತಿದ್ದೀರಾ?

ಶ್ರೀ ಕಾಗೋಡು ತಿಮ್ಮಪ್ಪ:- ಹಾಗೇನೂ ಇಲ್ಲ.

ಶ್ರೀ ಎ.ರಾಮದಾಸ್:- ಇದೆ. ಹಾಗಾದರೆ ಇಲ್ಲವೆಂದು ಈ ಸದನದಲ್ಲಿ ಹೇಳಿ. ಆಗಸ್ಟ್ 20ನೇ ತಾರೀಖಿನಿಂದ ಮಾರ್ಚಿ 17ನೇ ತಾರೀಖಿನವರೆಗೆ ಯಾರ್ಯಾರು ಟ್ರಾನ್ಸ್‌ಫರೆನ್ಸಿ ಆಕ್ಟ್‌ನ್ನು ವಯೋಲೇಟ್ ಮಾಡಿದ್ದಾರೆ; ಅವರಿಗೆ ಅದರ ಪ್ರಕಾರದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ನೀವು ಹೇಳಿ. ಆಮೇಲೆ ಮುಂದೆ ನೋಡೋಣ. ಅಂದರೆ ಆರು ತಿಂಗಳುಗಳ ಕಾಲ ಈಗಾಗಲೇ ಇಲ್ಲೀಗಲ್ ಆಗಿ ಯಾರು ಅವ್ಯವಹಾರ ಮಾಡಿದ್ದಾರೋ ಅದಕ್ಕೆ ಸ್ಯಾಂಕ್ಷನ್ ಕೊಡ್ತೀರಾ? ಹೇಳಿ ಹಾಗಂತ. ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ಟ್ರಾನ್ಸ್‌ಫರೆನ್ಸಿ ಆಕ್ಟ್‌ನಲ್ಲಿ ಎಕ್ಸ್‌ಂಪಶನ್ ಹೊದಮೇಲೆ ಆಗಸ್ಟ್ 20ನೇ ತಾರೀಖಿನಿಂದ ಮಾರ್ಚ್ 17ನೇ ತಾರೀಖಿನವರೆಗೆ ಆಗಿರುವಂಥ ಅವ್ಯವಹಾರಗಳಿಗೆ ನೀವು ಸ್ಯಾಂಕ್ಷನ್ ಕೊಟ್ಟಂತೆ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:- ರಾಮದಾಸ್‌ರವರೆ, ಇಲ್ಲಿ ಕೇಳಿ. ದಯವಿಟ್ಟು ಕೇಳಿ. ಇದು ಹಿಂದೆ ಕಾನೂನು ಬಂದ ತಾರೀಖಿನಿಂದ ಎರಡು ವರ್ಷ, ಈ ಎರಡು ವರ್ಷದ ಬದಲಾಗಿ ಮೂರು ವರ್ಷ ಎಂದು ಹೇಳಿದರೆ ಅದರಲ್ಲಿ ಈ ಆರು ತಿಂಗಳೂ ಸೇರಿಕೊಂಡಂತಾಗುತ್ತದೆ.

ಶ್ರೀ ಎ. ರಾಮದಾಸ್:- ಆ ಆರು ತಿಂಗಳು ಬೇಡ. ದಯವಿಟ್ಟು ತೆಗೆದು ಹಾಕಿ. ಇದನ್ನು ದಯವಿಟ್ಟು ಹಿಂದಕ್ಕೆ ತೆಗೆದುಕೊಳ್ಳಿ. ಏಕೆಂದರೆ ಇದರ ಹಿಂದುಗಡೆ ಬಹಳಷ್ಟು ಅವ್ಯವಹಾರಗಳು ಇವೆ. ಆದ್ದರಿಂದ ಇದನ್ನು ದಯವಿಟ್ಟು ಹಿಂದಕ್ಕೆ ತೆಗೆದುಕೊಳ್ಳಿ.

ಶ್ರೀ ಅರಗ ಜ್ಞಾನೇಂದ್ರ:- ಈ ಆರು ತಿಂಗಳಲ್ಲಿ ಯಾರ್ಯಾರಿಗೆ ಎಕ್ಸ್‌ಂಪಶನ್ ಕೊಟ್ಟಿದ್ದೀರಿ, ಎಷ್ಟು ಹಣಕ್ಕೆ ಎಕ್ಸ್‌ಂಪ್‌ಶನ್ ಕೊಟ್ಟಿದ್ದೀರಿ ಎನ್ನುವುದನ್ನು ಸದನದಲ್ಲಿ ಇಡಿ. ಆಮೇಲೆ ನಾವು ಇದರ ಬಗ್ಗೆ ಯೋಚನೆ ಮಾಡಿ ಇದಕ್ಕೆ ಒಪ್ಪಿಗೆ ಕೊಡೋಣ. ತಾವು ಪಾರದರ್ಶಕವಾಗಿ ಎಲ್ಲರ ಎದುರು ಹೇಳಿ, ನೋಡೋಣ.

ಶ್ರೀ ಸಿ.ಭೈರೇಗೌಡ:- ಮಾನ್ಯ ಉಪಾಧ್ಯಕ್ಷರೇ, ಅದೇ ರೀತಿಯಾಗಿ ನುಸಿ ರೋಗಕ್ಕೆ ಔಷಧಿಯನ್ನು ಕೊಂಡುಕೊಂಡರು.

ಶ್ರೀ ಕಾಗೋಡು ತಿಮ್ಮಪ್ಪ:- ತಾವು ಯಾವಾಗ ಆಗಿದ್ದು, ಎಂಬುದನ್ನು ಹೇಳದೆ ನೀವು ನುಸಿ ರೋಗಕ್ಕೆ ಎಂದು ಹೇಳಿದರೆ ಹೇಗೆ?

ಶ್ರೀ ಸಿ.ಭೈರೇಗೌಡ:- ಈ ನುಸಿ ರೋಗದಿಂದ ಇಡೀ ರೈತವರ್ಗಕ್ಕೆ ಇವತ್ತಿನ ದಿವಸ ತೊಂದರೆಯಾಗಿದೆ.

ಉಪಾಧ್ಯಕ್ಷರು:- ತಾವು ಈ ವಿಚಾರವನ್ನು ಬೇಡಿಕೆಗಳ ಬಗ್ಗೆ ಮಾತನಾಡುವಾಗ ಚರ್ಚೆ ಮಾಡಬಹುದಲ್ಲಾ..

ಶ್ರೀ ಸಿ.ಭೈರೇಗೌಡ:- ಈ ನುಸಿ ರೋಗಕ್ಕೆ ಎಂದು ಎಷ್ಟು ಔಷಧಿಯನ್ನು ಕೊಂಡುಕೊಡಿದ್ದೀರಿ? ಅದು ಏನಾಗಿದೆ, ಇದರ ಬಗ್ಗೆ ತಾವು ವಿವರವನ್ನು ಕೊಡಿ. ಏಕೆ ಅದಕ್ಕೆ ಎಗ್ಸ್‌ಮಷನ್ ಕೊಟ್ಟಿದ್ದೀರಿ?

ಶ್ರೀ ಕಾಗೋಡು ತಿಮ್ಮಪ್ಪ:- ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೇ, ನಾವು ಸರ್ಕಾರದ ನೀತಿಯನ್ನು ಪ್ರತಿಭಟಿಸುತ್ತೇವೆ, ಇಲ್ಲಿನ ಅವ್ಯವಹಾರಗಳನ್ನು ಎಕ್ಸ್‌ಟೆನ್ಷನ್ ಮಾಡುವುದಕ್ಕೆ ಹೊರಟಿದ್ದಾರೆ. ಇವರು 6 ತಿಂಗಳು ಎಂದು ಹೇಳಿಲ್ಲ, ಇಲ್ಲಿ 6 ತಿಂಗಳು ರೆಗ್ಯುಲರೈಜ್ ಮಾಡುವುದಕ್ಕೆ ಹೊರಟಿದ್ದಾರೆ. ಫರ್ದರ್ 6 ತಿಂಗಳು ಒಳಗೆ ಅವ್ಯವಹಾರ ಮಾಡುವುದಕ್ಕೆ ಹೊರಟಿದ್ದಾರೆ ಮತ್ತೂ ವೆಸ್ಟೆಡ್ ಇಂಟರೆಸ್ಟ್‌ಗೆ ಈ ಒಂದು ಕೆಲಸಗಳನ್ನು ವಹಿಸುವುದಕ್ಕೆ ಹೊರಟಿದ್ದಾರೆ. ಹೀಗಾಗಿ ಹೆಸರಿಗೆ ಮಾತ್ರ ಇದು ಪಾರದರ್ಶಕತೆಯ ಕಾನೂನು, ಒಳಗಡೆ ಯಾವುದೇ ಪಾರದರ್ಶಕತೆ ಇಲ್ಲ, ಎಲ್ಲಾ ಅವ್ಯವಹಾರಗಳನ್ನು ಮಾಡುವುದಕ್ಕೆ ಪ್ರೋತ್ಸಾಹವನ್ನು ಕೊಡುವಂಥಾದ್ದು ಇದು ಎಲ್ಲಾ ನಡೆಯುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದು ನಿಜ ಇದ್ದರೆ, ಈಗ ಅಂತಹ ಅವ್ಯವಹಾರಗಳು ನಡೆದಂತಹ ಪ್ರಕರಣಗಳು ಇದ್ದರೆ, ಅವರಿಗೆ ಬಜೆಟ್ ಮೇಲೆ, ಬೇಡಿಕೆಗಳ ಮೇಲೆ ಮಾತನಾಡುವಾಗ ಹೇಳುವುದಕ್ಕೆ ಅವಕಾಶವಿದೆ; ಮತ್ತೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಕೂಡ ಹೇಳುವುದಕ್ಕೆ ಅವಕಾಶವಿದೆ.

ಶ್ರೀ ಜಗದೀಶ್ ಶೆಟ್ಟರ್:- ನಾವು ನಿಮಗೆ ಹೇಳಿದ್ದೇವೆ, ನೀವು ಧೈರ್ಯದಿಂದ ಹೇಳುವುದಕ್ಕೆ ತಯಾರಿಲ್ಲ, ತಾವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ, ಎನ್‌ಕ್ವೈರಿಯನ್ನು ಮಾಡುತ್ತೇವೆ, ಆ ಪೇಪರ್‌ಗಳನ್ನು ಕೊಡಿ, ಎಂದು ಹೇಳುವುದಕ್ಕೆ ನೀವು ತಯಾರಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಯಾರು ಹೇಳಿದ್ದು? ಆ ರೀತಿ ನಾನು ಹೇಳಿಲ್ಲವಲ್ಲಾ...

ಶ್ರೀ ಜಗದೀಶ್ ಶೆಟ್ಟರ್:- ನೀವು ಈ ರೀತಿಯ ಅವ್ಯವಹಾರಗಳಿಗೆ ಎನ್‌ಕರೇಜ್ ಮಾಡುವುದಕ್ಕೆ ಅಮೆಂಡ್‌ಮೆಂಟ್ ತಂದಿದ್ದೀರಿ, ಮತ್ತೆ ಬೇರೆ ಏನೂ ಇಲ್ಲ. ಈ ಸರ್ಕಾರದಲ್ಲಿ ಪಾರದರ್ಶಕತೆ ಇಲ್ಲ, ಪಾರದರ್ಶಕತೆ ಹೆಸರಿನಲ್ಲಿ ಅವ್ಯವಹಾರವನ್ನು ಮುಂದುವರೆಸುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಉಪಾಧ್ಯಕ್ಷರೇ, ಇದು ಸರ್ವಥಾ ಅಲ್ಲ, ತಪ್ಪು ಹೇಳಿಕೆಯನ್ನು ಕೊಡುತ್ತಿದ್ದಾರೆ, ನಾವು ಪ್ರಾಮಾಣಿಕವಾಗಿ ನಡೆದುಕೊಂಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೇ, ನಾವು ಸರ್ಕಾರದ ನೀತಿಯನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಗೊಂದಲ)

(ಬಿ.ಜೆ.ಪಿ. ಪಕ್ಷದ ಮಾನ್ಯ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ,

"2003ನೇ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು:- ಪ್ರಸ್ತವಾ ಏನೆಂದರೆ:-"ಖಂಡ 2 ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ಅನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ; "ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಕಾಗೋಡು ತಿಮ್ಮಪ್ಪ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷರೇ,"2003ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ;

"2003ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಆ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

(ii) ಕರ್ನಾಟಕ ಬಿಕ್ಷಾಟಣೆ ನಿಷೇಧ (ತಿದ್ದುಪಡಿ) ವಿಧೇಯಕ, 2002

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ.ಕೃಷ್ಣಪ್ಪ(ಸಮಾಜ ಕಲ್ಯಾಣ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷರೇ, "2002ರ ಕರ್ನಾಟಕ ಭಿಕ್ಷಾಟಣೆ ನಿಷೇಧ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ.ಕೃಷ್ಣಪ್ಪ(ಸಮಾಜ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಈಗ ಇರುವಂತಹ ಕಾನೂನಿನಲ್ಲಿ ಈ ಭಿಕ್ಷಾಟಣೆಯ ವಿಚಾರದಲ್ಲಿ ಅವರನ್ನು ನಾವುಸರ್ಕಾರದ ವಶಕ್ಕೆ ತೆಗೆದುಕೊಂಡಾಗ, ಅವರಿಗೆ ಮ್ಯಾಕ್ಸಿಮಮ್ ಒಂದು ವರ್ಷ ಇಟ್ಟುಕೊಳ್ಳುವುದಕ್ಕೆ ಅವಕಾಶವಿತ್ತು, ಅಂತಹ ಸಂದರ್ಭದಲ್ಲಿ ಅವರಿಗೆ ಜಾಮೀನು ಕೊಡುವಂತಹ ವಿಚಾರದಲ್ಲಿ ನಾವು ಮಾಡಿರುವಂತಹ ತಿದ್ದುಪಡಿಯಲ್ಲಿ, ಪರ್ಸನಲ್ ಬಾಂಡ್ ಅನ್ನು ತೆಗೆದುಕೊಂಡು ಬಿಡುವಂಥಾದ್ದು, ಮತ್ತೆ ಮಿನಿಮಮ್ ಪಿರೀಯಡ್ ಮೂರು ವರ್ಷಗಳಿಗೆ ಮಾಡುವಂಥಾದ್ದು, ಇದರ ಜೊತೆಜೊತೆಯಲ್ಲಿ ಈ ಕರ್ನಾಟಕ ರಾಜ್ಯದಲ್ಲಿ ಭಿಕ್ಷಾಟಣೆ ನಿಷೇಧ ತಿದ್ದುಪಡಿ ವಿಧೇಯಕದಲ್ಲಿ ನಮ್ಮ ಮುನಿಸಿಪಾಲಿಟಿಗಳು, ಕಾರ್ಪೋರೇಷನ್‌ಗಳು ಏನು ಸೆಸ್ ಅನ್ನು ಕೊಡಬೇಕಾಗಿತ್ತು, ಆ ಸೆಸ್ ಅನ್ನು ನಮ್ಮಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಕೊಡುವಂತಹ ಸಂದರ್ಭಗಳಲ್ಲಿ ಅಡಚಣೆಗಳು ಉಂಟಾಗುತ್ತಿತ್ತು. ಇದನ್ನು ತಪ್ಪಿಸುವುದಕ್ಕೆ ವಾರ್ನಿಂಗ್ ನೋಟೀಸ್ ಕೊಡುವಂಥಾದ್ದು ಮತ್ತೆ ಆ ದುಡ್ಡು ವಸೂಲಿಯಾಗದಿದ್ದರೆ, ಅವರಿಗೆ ಇದನ್ನು ರೆವಿನ್ಯೂ ಅರಿಯರ್ಸ್ ಎಂದು ಟ್ರೀಟ್ ಮಾಡಿ, ಅದನ್ನು ಕಲೆಕ್ಟ್ ಮಾಡಿಕೊಳ್ಳುವುದಕ್ಕೆ ಈ ತಿದ್ದುಪಡಿಯನ್ನು ಸದನದ ಮುಂದೆ ತಂದಿದ್ದೇವೆ; ಇದಕ್ಕೆ ತಮ್ಮ ಅಂಗೀಕಾರ ನೀಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.